ಕರ್ನಾಟಕ ವಿಧಾನಸಭೆ

ಸೋಮವಾರ 31ನೇ ಜನವರಿ 2005 ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆ 53 ನಿಮಿಷಕ್ಕೆ ಸಮಾವೇಶಗೊಂಡಿತು. ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

1) ಸಂತಾಪ ಸೂಚನೆ

ಅಧ್ಯಕ್ಷರು : ಈಗ ಸಂತಾಪ ಸೂಚನೆ. ಶಿಕ್ಷಣ ತಜ್ಞ ಡಾ: ಹೆಚ್. ನರಸಿಂಹಯ್ಯ ಹಾಗೂ ಕರ್ನಾಟಕ ಕ್ರಿಕೆಟ್ ಸಂಸ್ಥೆಯ ಮಾಜಿ ಕಾರ್ಯದರ್ಶಿ ಶ್ರೀ ಸಿ. ನಾಗರಾಜ್‌ರವರು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರು, ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಡಾ: ಹೆಚ್. ನರಸಿಂಹಯ್ಯ ಅವರು ದಿನಾಂಕ 6ನೇ ಜೂನ್ 1920ರಂದು ಗೌರಿಬಿದನೂರು ತಾಲ್ಲೂಕು, ಹೊಸೂರಿನಲ್ಲಿ ಜನಿಸಿದರು. ಶಿಕ್ಷಣ ತಜ್ಞರಾಗಿದ್ದ ಶ್ರೀಯುತರು ನ್ಯಾಷನಲ್ ಕಾಲೇಜಿನ ಭೌತಶಾಸ್ತ್ರದ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸಿದ್ದು, ಬೆಂಗಳೂರು ವಿಶ್ವವಿದ್ಯಾನಿಲಯದ ಉಪ ಕುಲಪತಿಗಳಾಗಿದ್ದರು. ಅಮೇರಿಕಾದ ಓಹಿಯೋ ಸ್ಟೇಟ್ ವಿಶ್ವವಿದ್ಯಾನಿಲಯದಿಂದ ಅಣುಭೌತ ವಿಜ್ಞಾನದಲ್ಲಿ ಪಿ.ಹೆಚ್.ಡಿ. ಪದವಿಯನ್ನು ಪಡೆದಿದ್ದರು. ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಅವರು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ, ಸೆರೆಮನೆವಾಸ ಅನುಭವಿಸಿದ್ದರು. ಕರ್ನಾಟಕ ರಾಜ್ಯದ ವಿಜ್ಞಾನ ಪರಿಷತ್ತಿನ ಅಧ್ಯಕ್ಷರಾಗಿ, ನ್ಯಾಷನಲ್ ವಿದ್ಯಾ ಸಂಸ್ಥೆಯ ಅಧ್ಯಕ್ಷರಾಗಿ, ಬೆಂಗಳೂರು ವಿಜ್ಞಾನ ವೇದಿಕೆಯ ಅಧ್ಯಕ್ಷರಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದ ಶ್ರೀಯುತರು ಶಿಕ್ಷಣ ತಜ್ಞರಾಗಿ ರಾಜ್ಯದ ಅಭಿವೃದ್ಧಿಗೆ ಅಪಾರವಾಗಿ ದುಡಿದಿದ್ದರು. ಇವರು ನಾಡಿಗೆ ಸಲ್ಲಿಸಿದ ಸೇವೆಯನ್ನು ಗುರುತಿಸಿ ಭಾರತ ಸರ್ಕಾರವು 1984ರಲ್ಲಿ ಪದ್ಮಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು. 1980ರಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾಗಿ ನಾಮಕರಣ ಹೊಂದಿ ಅಪಾರ ಸೇವೆ ಸಲ್ಲಿಸಿರುತ್ತಾರೆ.

ಡಾ: ಹೆಚ್. ನರಸಿಂಹಯ್ಯ ಅವರು ದಿನಾಂಕ 31-1-2005ರಂದು ನಿಧನ ಹೊಂದಿದರು. ಇನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಮಾಜಿ ಕಾರ್ಯದರ್ಶಿಗಳಾಗಿದ್ದ ಸಿ. ನಾಗರಾಜ್‌ರವರು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಕಾರ್ಯದರ್ಶಿಯಾಗಿ 1992ರಿಂದ 1996ರವರೆಗೆ ಸೇವೆ ಸಲ್ಲಿಸಿ, 1978ರಲ್ಲಿ ಕೆ.ಎಸ್.ಸಿ.ಎ. ದ ಕಾರ್ಯದರ್ಶಿಯಾಗಿದ್ದ ಅವರು 1998ರವರೆಗೆ ಅದೇ ಹುದ್ದೆಯಲ್ಲಿದ್ದು, ಕ್ರಿಕೆಟ್ ಮಂಡಳಿಗೆ ಅಪಾರ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ದಿನಾಂಕ 28-1-2005ರಂದು ನಿಧನ ಹೊಂದಿದರು.

ಮೃತರ ಆತ್ಮಕ್ಕೆ ಭಗವಂತ ಶಾಂತಿಯನ್ನು ಕೊಡಲಿ ಎಂದು ಕೋರುತ್ತೇನೆ. ಈಗ ಮಾನ್ಯ ಸಭಾನಾಯಕರು ಮಾತನಾಡುತ್ತಾರೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೇ, ಡಾ: ಹೆಚ್. ನರಸಿಂಹಯ್ಯನವರ ನಿಧನದಿಂದ ಇವತ್ತು ಕರ್ನಾಟಕ ರಾಜ್ಯ ಒಬ್ಬರು ಹಿರಿಯರು, ಶಿಕ್ಷಣ ತಜ್ಞರು, ಪ್ರಗತಿಪರ ವಿಚಾರಧಾರೆಯ ಒಬ್ಬ ಧೀಮಂತ ಹಿರಿಯರನ್ನು ಕಳೆದುಕೊಂಡಂತಾಗಿದೆ. ದಿವಂಗತರ ಬಗ್ಗೆ ನಾವೇನೂ ಹೆಚ್ಚು ಹೇಳಬೇಕಾಗಿಲ್ಲ. ಅವರು ಶಿಕ್ಷಣ ಕ್ಷೇತ್ರದಲ್ಲಿ ಬಹಳಷ್ಟು ಕೆಲಸ ಮಾಡಿರತಕ್ಕಂಥ ವ್ಯಕ್ತಿಗಳಾಗಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ವಿಶೇಷವಾಗಿ, ಶಿಕ್ಷಣ ಕ್ಷೇತ್ರಕ್ಕೆ, ಅದರಲ್ಲೂ ವಿಶೇಷವಾಗಿ ಬಡ ವಿದ್ಯಾರ್ಥಿಗಳಿಗೆ ಅಪಾರ ಕೊಡುಗೆಯನ್ನು ನೀಡಿದ್ದಾರೆ. ನ್ಯಾಷನಲ್ ಕಾಲೇಜಿನ ಪ್ರಿನ್ಸಿಪಾಲರಾಗಿ, ಇತರ ಶಿಕ್ಷಣ ಸಂಸ್ಥೆಗಳಲ್ಲಿ ಕೂಡ ಸಲಹೆಗಾರರಾಗಿ ಅವರು ಕೆಲಸ ಮಾಡಿದ್ದಾರೆ. ಅವರ ಒಂದು ದೃಷ್ಟಿಕೋನ ಏನಿತ್ತು ಎಂದರೆ, ಸಮಾಜದಲ್ಲಿರತಕ್ಕಂಥ ಬಡವರ, ಸಾಮಾನ್ಯ ಜನರ ಸಮಸ್ಯೆಗಳ ಬಗ್ಗೆ ಒಂದು ಹೆಚ್ಚಿನ ಕಾಳಜಿಯನ್ನು ಇಟ್ಟುಕೊಂಡಿದ್ದರು. ಅವರು ತಮ್ಮ ಸಾಕಷ್ಟು ಕ್ರಾಂತಿಕಾರಕವಾದಂಥ ವಿಚಾರಧಾರೆ ಮತ್ತು ಪ್ರಗತಿಪರವಾದಂಥ ವಿಚಾರಧಾರೆಗಳ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚು ಬದಲಾವಣೆಯಾಗಬೇಕು ಎನ್ನತಕ್ಕಂಥ ರೀತಿಯಲ್ಲಿ ರಾಷ್ಟ್ರಕ್ಕೆ, ರಾಜ್ಯಕ್ಕೆ ಒಂದು ಹೆಚ್ಚಿನ ರೀತಿಯಲ್ಲಿ ಸಲಹೆ ಕೊಡತಕ್ಕಂಥ ರೀತಿಯಲ್ಲಿ ಇದ್ದ ಒಬ್ಬ ಶಿಕ್ಷಣ ತಜ್ಞರನ್ನು ಕಳೆದುಕೊಂಡಂತಾಗಿದೆ. ಇತ್ತೀಚಿನ ದಿವಸಗಳಲ್ಲಿ ನಾವು ನಿಟ್ಟೂರು ಶ್ರೀನಿವಾಸರಾವ್‌ರವರನ್ನು ಕಳೆದುಕೊಂಡಿದ್ದೇವೆ. ಕೊಲ್ಲೂರು ಮಲ್ಲಪ್ಪನವರು ನಮ್ಮನ್ನು ಅಗಲಿ ಹೋಗಿದ್ದಾರೆ. ಇಂಥ ಒಂದು ಸಂದರ್ಭದಲ್ಲಿ ಇವತ್ತು ನಾವು ನರಸಿಂಹಯ್ಯನವರನ್ನು ಕಳೆದುಕೊಂಡಿದ್ದೇವೆ. ಇದರಿಂದ ರಾಜ್ಯದ ಜನತೆಗೆ ಅಪಾರವಾದಂಥ ಒಂದು ದು:ಖವಾಗಿದೆ. ಅವರಿಗೆ ಯಾರೂ ಇರಲಿಲ್ಲ. ಅವರು ಒಬ್ಬರೇ ಇದ್ದರು, ಅವರನ್ನು ನೋಡಿಕೊಳ್ಳತಕ್ಕಂಥವರು ಯಾರೂ ಇರಲಿಲ್ಲ. ಅವರು ಅದೇ ಕಾಲೇಜಿನಲ್ಲಿ ಒಂದು ಕೋಣೆಯಲ್ಲಿ ತಮ್ಮ ಪೂರ್ಣ ತುಂಬು ಜೀವನವನ್ನು ಮಾಡಿದ್ದಾರೆ. ಅವರು, ಯಾವ ರೀತಿ ಹೇಳಿದ್ದರೋ, ಅದೇ ರೀತಿ ನಡೆದುಕೊಂಡು ಹೋಗಿದ್ದಾರೆ. ಈ ದೇಶದಲ್ಲಿ, ಹೇಳತಕ್ಕಂಥಾದ್ದಕ್ಕೂ, ನಡೆದುಕೊಳ್ಳತಕ್ಕಂಥಾದ್ದಕ್ಕೂ ಬಹಳಷ್ಟು ವ್ಯತ್ಯಾಸಗಳಿರುವುದನ್ನು ನಾವು ನೋಡುತ್ತಿದ್ದೇವೆ. ಆದರೆ ಹೇಳಿದಂತೆ ನಡೆದುಕೊಂಡಂಥವರು ಅವರು. ಆ ರೀತಿಯಾಗಿ, ಒಬ್ಬ ನಿಷ್ಠಾವಂತ, ಒಬ್ಬ ಮಾರ್ಗದರ್ಶಕರನ್ನು ನಾವು ಕಳೆದುಕೊಂಡಂತಾಗಿದೆ. ಅವರು ತಮ್ಮ ವಿಚಾರಗಳ ಮೂಲಕ ಒಂದು ಹೊಸ ತಿರುವನ್ನೇ ಕೊಟ್ಟಿದ್ದಾರೆ. ಮಠಾಧಿಪತಿಗಳ ಬಗ್ಗೆಯಾಗಲೀ ಅಥವಾ ದೇಶದ ಧಾರ್ಮಿಕ ವಿಚಾರಗಳ ಬಗ್ಗೆಯಾಗಲೀ, ಇವೆಲ್ಲಾ ಮೂಢನಂಬಿಕೆಗಳ ಬಗ್ಗೆ ಅವರು ತಮ್ಮದೇ ಆದಂಥ ವಿಚಾರಧಾರೆಯನ್ನು ಮೂಡಿಸತಕ್ಕಂಥ ದಿಕ್ಕಿನಲ್ಲಿ ಅವರು ಯಶಸ್ವಿಯಾಗಿದ್ದಾರೆ. ಅವರು ವಿಧಾನ ಪರಿಷತ್ತಿನ ಸದಸ್ಯರಾಗಿ ಕೂಡ ಕೆಲಸ ಮಾಡಿದ್ದಾರೆ. ವಿಧಾನ ಪರಿಷತ್ತಿನಲ್ಲೂ ಕೂಡ ಅವರು ರಾಜಕೀಯ, ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟ ಸಾಕಷ್ಟು ಸಮಸ್ಯೆಗಳ ಬಗ್ಗೆ ಬಹಳಷ್ಟು ಪ್ರಸ್ತಾಪವನ್ನೂ ಕೂಡ ಮಾಡಿದ್ದಾರೆ. ಇವತ್ತು ಅವರು ನಮ್ಮ ಜೊತೆಗಿಲ್ಲ. 1980ರಲ್ಲಿ, ದಿವಂಗತ

ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದಾಗ ನಾನು ನಗರಾಭಿವೃದ್ಧಿ ಸಚಿವನಾಗಿದ್ದೆ. ಅವರಿಂದ ನನಗೆ ಒಂದು ದಿನ ಫೋನ್ ಬಂತು. ಗುಡಿಬಂಡೆಯಲ್ಲಿ ನಮ್ಮದೊಂದು ಜ್ಯೂನಿಯರ್ ಕಾಲೇಜ್ ಇದೆ, ಅಲ್ಲಿಗೆ ಒಂದು ಬೋರ್‌ವೆಲ್ ಹಾಕಿಸಿ ಕೊಡಬೇಕು ಎಂದು ಅವರು ನನಗೆ ಹೇಳಿದರು. ನಾನು ಅಲ್ಲಿಗೆ ಬೋರ್‌ವೆಲ್ ಹಾಕಿಸಿ ಕೊಟ್ಟಾದ ಮೇಲೆ, ಅಲ್ಲಿ ನೀರು ಚೆನ್ನಾಗಿ ಬಂತು ಎಂದು ಅವರು ನನಗೆ ಮತ್ತು ಬೇರೆ ಕೆಲವರಿಗೆ ಹೇಳಿ, ಆ ಕಾಲೇಜಿಗೆ ನನ್ನನ್ನು ಕರೆದುಕೊಂಡು ಹೋಗಿದ್ದರು. ಆ ಕಾಲೇಜಿನಲ್ಲಿ ಯಾವ ರೀತಿಯಾಗಿ ಶಿಕ್ಷಣದ ಬಗ್ಗೆ, ವಿಶೇಷವಾಗಿ ಹಳ್ಳಿ ಪ್ರದೇಶದಲ್ಲಿರತಕ್ಕಂಥ ಜನರ ಬಗ್ಗೆ ಮಾಡತಕ್ಕಂಥ ಕೆಲಸವನ್ನೂ ಕೂಡ ಅವರ ಜೊತೆಗೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಸಾಕಷ್ಟು ಸಲ ಬಂದಿದ್ದಾರೆ, ಭೇಟಿಯಾಗಿದ್ದಾರೆ, ಅವರು ಇವತ್ತು ನಮ್ಮಲ್ಲಿ ಇಲ್ಲ. ಈಗಾಗಲೇ ನಮ್ಮ ವಿರೋಧ ಪಕ್ಷದ ನಾಯಕರು ಹಾಗೂ floor leaders ಜೊತೆಗೆ ನಾನು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಮಾತನಾಡಿದ್ದೇವೆ. ಇಂಥ ಒಬ್ಬ ಚಿಂತಕ ಮತ್ತು ಕರ್ನಾಟಕಕ್ಕೆ ಏನು ಅಪಾರವಾದ ಸೇವೆಯನ್ನು ಸಲ್ಲಿಸಿದ್ದಾರೆ ಅವರು ನಮ್ಮನ್ನು ಅಗಲಿ ಹೋಗಿದ್ದಾರೆ. ಅದಕ್ಕೆ ವಿಶೇಷವಾಗಿ ಸದನದಲ್ಲಿ ಇವತ್ತಿನ ದಿವಸ ಬೇರೆ ಚರ್ಚೆಗೆ ಅವಕಾಶ ಕೊಡಲಾರದೆ ಅವರ ಸಂತಾಪ ಸೂಚನೆಯನ್ನು ಕೊಟ್ಟು ಇವತ್ತು ಬಿಡುವು ಮಾಡಿಕೊಡಬೇಕೆನ್ನುವ ಪ್ರಸ್ತಾಪ ಇದೆ. ಅದಕ್ಕೆ ಎಲ್ಲರೂ ಕೂಡ ಒಪ್ಪಿದ್ದಾರೆ. ಇದು ಅವರ ಗೌರವಾರ್ಥವಾಗಿ ಮಾಡುತ್ತಿದ್ದೇವೆ, ಇದಕ್ಕಿಂತ ಹೆಚ್ಚಿಗೆ ಏನು ಮಾಡಲಿಕ್ಕಾಗುವುದಿಲ್ಲ. ಅವರ selfless service ಏನಿದೆ ಆ ಸೇವೆಗಾಗಿ, ಅವರ ನೆನಪಿಗಾಗಿ ಇವತ್ತಿನ ದಿವಸ ನಾವು ಸಭೆಯನ್ನು ಮುಂದಕ್ಕೆ ಹಾಕಬೇಕೆಂದಿದ್ದೇವೆ. ಅದೇ ರೀತಿಯಾಗಿ 1978ರಿಂದ ಕ್ರಿಕೆಟ್‌ನಲ್ಲಿ ಶ್ರೀ ಸಿ. ನಾಗರಾಜ್‌ರವರು ಬಹಳ ಸೇವೆ ಸಲ್ಲಿಸಿದ್ದಾರೆ, ಬೆಂಗಳೂರಿನಲ್ಲಿ ಕ್ರಿಕೆಟ್ ಟೆಸ್ಟ್ ಪಂದ್ಯ ನಡೆಯುವಂತಾಗಲು ಅವರೇ ಕಾರಣಕರ್ತರು. 1978 ರಿಂದ 1998ರವರೆಗೆ ಅವರು ಈ ಕ್ರಿಕೆಟ್ ಬಗ್ಗೆ ಹೆಚ್ಚಿನ ಆಸಕ್ತಿವಹಿಸಿ, ಸ್ಟೇಡಿಯಂ ಆಗಬೇಕಾದರೆ ಅವರೇ ಕಾರಣಕರ್ತರು. ಅವರೂ ಕೂಡ ನಮ್ಮನ್ನು ಆಗಲಿ ಹೋಗಿದ್ದಾರೆ. ಜೀವನದಲ್ಲಿ ಒಳ್ಳೆಯ ಕೆಲಸ ಮಾಡುತ್ತಾರೋ ಅವರಿಗೆ ಜೀವನದಲ್ಲಿ ಕೂಡ ತೊಂದರೆ ಬರುತ್ತದೆ. ಅದರಂತೆ ಅವರಿಗೆ ಏನು ತೊಂದರೆ ಎಂದರೆ ಅವರನ್ನೇ ಆ ಸಂಸ್ಥೆಯಿಂದ ಹೊರಗೆ ಹಾಕತಕ್ಕಂಥ ಪ್ರಯತ್ನವಾಯಿತು. ಆವಾಗ ಶ್ರೀ ವಾಟಾಳ್ ನಾಗರಾಜ್‌ರವರು, ನಮ್ಮ ಶ್ರೀ ರಮೇಶ್‌ಕುಮಾರ್‌ರವರು ಬಂದರು. ಏನ್ರೀ, ಯಾರು ಅಪಾರ ಸೇವೆ ಸಲ್ಲಿಸಿದ್ದಾರೆ ಅವರಿಗೆ ಈ ತರಹ ಆಗಿದೆ ಎಂದು ಹೇಳಿದಾಗ, ನಾನು ಮತ್ತು ಶ್ರೀ ಎಂ.ಪಿ. ಪ್ರಕಾಶ್‌ರವರು ಸೇರಿ ಅಲ್ಲಿಯ ಶ್ರೀ ಬ್ರಿಜೇಶ್ ಪಾಟೀಲರನ್ನು ಕರೆದೆವು. ಆಗ ನಮ್ಮ ಶ್ರೀ ಸಿಂಧ್ಯಾರವರೂ ಸಹ ಇದ್ದರು, ಅವರು ಅವರ ಊರಿನವರು. ನಾವೆಲ್ಲಾ ಅವರನ್ನು ಕರೆಸಿ ಮಾತನಾಡಿ, 'ಈ ತರಹ ಅಪಮಾನ ಅವರಿಗೆ ಮಾಡಬಾರದು, ಬೇರೆ ರೀತಿಯಲ್ಲಿ ಅವರಿಗೆ

ಸೇವೆ ಸಿಗಲಿಲ್ಲವೆಂದು ಈ ರೀತಿಯಾಗಿ ಅನ್ಯಾಯವಾಗಬಾರದು, ವಾದವಿವಾದಕ್ಕೆ ಅವಕಾಶವಿಲ್ಲ, ಇವತ್ತು ಅವರು ಸೇವೆ ಸಲ್ಲಿಸಿದ್ದಾರೆ, ಈ ಕ್ರಿಕೆಟ್ ಸ್ಟೇಡಿಯಂ ಬರತಕ್ಕಂಥದ್ದರಲ್ಲಿ ಹೆಚ್ಚಿನ ಅವರ ಸೇವೆ ಇದೆ. ಅಂಥವರಿಗೆ ಇಂಥ ಒಂದು ಅಪಮಾನವಾಗಬಾರದು, ಅವರಿಗೆ ಮರ್ಯಾದೆ ಕೊಡಬೇಕೆಂದು ನಾನು ನನ್ನ ಚೇಂಬರ್‌ನಲ್ಲಿ ಕರೆಸಿ ಮಾತನಾಡಿದ್ದೇವೆ.' ಆ ಕ್ಷಣ ಅವರಿಗೆ ಜೀವನದಲ್ಲಿ ತೃಪ್ತಿ ಕೊಟ್ಟಿದೆ. ನಾವು ಮಾನ್ಯ ಸಿಂಧ್ಯಾರವರು, ಪ್ರಕಾಶ್‌ರವರು, ರಮೇಶ್‌ಕುಮಾರ್‌ರವರು ಮಾತನಾಡಿ ಅವರಿಗೆ ಏನು ಒಂದು ತರಹ ಮುಜುಗರ, ತೊಂದರೆಯಾಗಿದೆ ಅದು ಆಗಬಾರದೆನ್ನತಕ್ಕಂಥ ಸರ್ಕಾರದ ಅಭಿಪ್ರಾಯ ತಿಳಿಸಿದ್ದೆವು. ಅವರೂ ಕೂಡ ಇಂದು ನಮ್ಮನ್ನು ಅಗಲಿ ಹೋಗಿದ್ದಾರೆ. ಅದಕ್ಕೆ ಅವರಿಗೂ ಕೂಡ ತಾವೇನು ಸಂತಾಪ ಸೂಚನೆ ಮಂಡಿಸಿದ್ದೀರಿ, ಅದರ ಬಗ್ಗೆ ನಾನು ಅನುಮೋದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇವತ್ತು ಸನ್ಮಾನ್ಯ ಸಭಾಧ್ಯಕ್ಷರು, ಸಭಾನಾಯಕರು ಯಾವ ಸಂತಾಪ ಸೂಚನೆಯನ್ನು ತಂದು ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ನಾನು ಧ್ವನಿಗೂಡಿಸುತ್ತಾ, ಸರಳ ಸಜ್ಜನಿಕೆಯ ವ್ಯಕ್ತಿತ್ವವನ್ನು ಹೊಂದಿದ್ದಂಥ, ಪದ್ಮಭೂಷಣ ಪ್ರಶಸ್ತಿಯನ್ನು ಪಡೆದರೆಂದರೆ ಆ ಪದ್ಮಭೂಷಣ ಪ್ರಶಸ್ತಿಗೆ ಒಂದು ಗೌರವ ತಂದುಕೊಟ್ಟ ವ್ಯಕ್ತಿಯಾದಂಥ ಡಾ: ಹೆಚ್. ನರಸಿಂಹಯ್ಯನವರನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಶಿಕ್ಷಣ ಕ್ಷೇತ್ರದಲ್ಲಿ ಅವರ ಸಾಧನೆ ಅಪರೂಪವಾದದ್ದು. ಬಹುಶ: ನಿಜವಾದಂಥ ಒಬ್ಬ ಗಾಂಧಿವಾದಿಯನ್ನು ಕಳೆದುಕೊಂಡಿದ್ದೇವೆಂದು ಹೇಳಬಹುದು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಅವರ ಪಾತ್ರ ಇವತ್ತಿನ ಯುವ ಪೀಳಿಗೆಗೆ ಒಂದು ಮಾರ್ಗದರ್ಶನ ಆಗುವ ರೀತಿಯಲ್ಲಿ ಅವರು ಅವತ್ತು ಆ ಹೋರಾಟದಲ್ಲಿ ಪಾಲ್ಗೊಂಡಿದ್ದರು. ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಅವರು ಮಾಡಿದಂಥ ಕೆಲಸಗಳನ್ನು ಮಾತ್ಯಾರೂ ಮಾಡುವುದಕ್ಕೆ ಆಗದಿರುವ ರೀತಿಯಲ್ಲಿ ದೊಡ್ಡ ಸಾಧನೆಯನ್ನು ಮಾಡಿ ತೋರಿಸಿದ್ದಾರೆ. ವಿಧಾನ ಪರಿಷತ್ತಿನ ಸದಸ್ಯರಾಗಿ ಅಲ್ಲಿರುವಂಥ ಶಾಸಕರಿಗೆ ಸದನದಲ್ಲಿ ಒಂದು ಮಾರ್ಗದರ್ಶನ ಮಾಡುವಂಥ ಕೆಲಸವನ್ನೂ ಸಹ ಅವರು ಮಾಡಿದ್ದಾರೆ. ಈ ಕನ್ನಡಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಕನ್ನಡಕ್ಕೆ ಹೆಚ್ಚು ಹಿರಿಮೆಯನ್ನು, ಹೆಚ್ಚು ಒತ್ತನ್ನು ಕೊಡುವುದಕ್ಕೆ ಅವರು ತಮ್ಮದೇ ಆದಂಥ ಪಾತ್ರವನ್ನು ವಹಿಸಿದ್ದಾರೆ. ಇಂತಹ ಹಿರಿಯ ವ್ಯಕ್ತಿಗಳನ್ನು ಕಳೆದುಕೊಂಡು ಕನ್ನಡ ನಾಡಿನ ಜನತೆ ನಾವು ಬಡವಾಗಿದ್ದೇವೆಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಅದೇ ರೀತಿ ಶ್ರೀ ನಾಗರಾಜ್‌ರವರು ಇಲ್ಲಿ ಭಾರತ ಕ್ರಿಕೆಟ್ ಮಂಡಳಿಯ ಕಾರ್ಯದರ್ಶಿಯಾಗಿ, ಕರ್ನಾಟಕ ಕ್ರಿಕೆಟ್ ಮಂಡಳಿಯ ಅಧ್ಯಕ್ಷರಾಗಿ ಮತ್ತು ಅವರ ಸಾಕ್ಷಿ ಎಂದರೆ ಚಿನ್ನಸ್ವಾಮಿ ಕ್ರೀಡಾಂಗಣ. ಬಹುಶ: ಅವರ ದೂರದೃಷ್ಟಿಯಿಂದ, ಬಹುಶ: ಇಡೀ ದೇಶದಲ್ಲಿಯೇ ಮಾದರಿಯಾದಂಥ ಒಂದು ಕ್ರೀಡಾಂಗಣವನ್ನು ಕಟ್ಟಿಸುವುದರಲ್ಲಿ

ಯಶಸ್ವಿಯಾಗಿದ್ದಾರೆ. ಈ ಒಂದು ದಿವಸದ ಕ್ರಿಕೆಟ್ ಮ್ಯಾಚ್ ಪ್ರಾರಂಭವಾದದ್ದು ಅವರ ಕಾಲದಲ್ಲಿ. ಅಂಥ ಇಬ್ಬರು ಹಿರಿಯ ವ್ಯಕ್ತಿಗಳನ್ನು ನಾವು ಕಳೆದುಕೊಂಡು, ವಿಶೇಷವಾಗಿ ಡಾ: ನರಸಿಂಹಯ್ಯ ನವರನ್ನು ಕಳೆದುಕೊಂಡು ಕನ್ನಡನಾಡಿನಲ್ಲಿರುವ ನಾವು ತಬ್ಬಲಿಯಾಗಿದ್ದೇವೆಂದು ನಾನು ಭಾವಿಸಿದ್ದೇನೆ. ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ನನ್ನ ಪಕ್ಷದ ಪರವಾಗಿ ನನ್ನ ಶ್ರದ್ಧಾಂಜಲಿಯನ್ನು ನಾನು ಅವರಿಗೆ ಅರ್ಪಿಸುತ್ತೇನೆ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿ) : ಮಾನ್ಯ ಸಭಾಧ್ಯಕ್ಷರೆ, ಡಾ: ಹೆಚ್. ನರಸಿಂಹಯ್ಯ ನವರು ಕರ್ನಾಟಕ ರಾಜ್ಯಕ್ಕೆ ಶಿಕ್ಷಣ ಕ್ಷೇತ್ರದಲ್ಲಿ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಅಪಾರವಾದಂಥ ಕೊಡುಗೆಯನ್ನು ಕೊಟ್ಟಿರತಕ್ಕಂಥ ಒಬ್ಬ ಮಹಾನ್ ವ್ಯಕ್ತಿ ಎಂದು ನಾನು ಇವತ್ತು ನೆನೆದುಕೊಳ್ಳುತ್ತಿದ್ದೇನೆ. ಅವರು ಸ್ವಾತಂತ್ರ್ಯ ಹೋರಾಟಗಾರರಾಗಿ, ಕ್ವಿಟ್ ಇಂಡಿಯಾ ಮೂವ್‌ಮೆಂಟ್‌ನಲ್ಲಿ ಭಾಗಿಯಾಗಿ ಈ ದೇಶದ ಸ್ವಾತಂತ್ರ್ಯಕ್ಕೋಸ್ಕರ ಹೋರಾಟ ಮಾಡಿದಂಥವರು. ಎಲ್ಲಕ್ಕಿಂತ ಮುಖ್ಯವಾಗಿ ಇಡೀ ಅವರ ಬದುಕಿನ ಉದ್ದಕ್ಕೆ ಸಾಮಾಜಿಕ ಕಳಕಳಿಯನ್ನಿಟ್ಟುಕೊಂಡು ಅದಕ್ಕೆ ಬದ್ಧರಾಗಿ ಸಮಾಜದಲ್ಲಿರತಕ್ಕಂಥ ಮೌಢ್ಯಗಳ ವಿರುದ್ಧ ಹೋರಾಟವನ್ನು ಮಾಡಿದಂಥ ಒಬ್ಬ ವೈಚಾರಿಕತೆಯನ್ನು ರೂಢಿಸಿಕೊಂಡು ಬಂದಂಥ ವ್ಯಕ್ತಿಯೆಂದು ಇವತ್ತು ನೆನಪು ಮಾಡಿಕೊಳ್ಳಬೇಕಾಗುತ್ತದೆ. ವೈಚಾರಿಕತೆಯ ಬಗ್ಗೆ ಮತ್ತು ಮೌಢ್ಯಗಳ ವಿರುದ್ಧ ಅನೇಕ ಜನರು ಮಾತನಾಡುತ್ತಾರೆ, ಆದರೆ ನಿಜವಾಗಿ ವೈಚಾರಿಕತೆಯನ್ನು ತಮ್ಮ ಬದುಕಿನಲ್ಲಿ ರೂಢಿಸಿಕೊಂಡು ಅದರಂತೆ ತಮ್ಮ ಬದುಕಿನಲ್ಲೂ ನಡೆದುಕೊಂಡಿರತಕ್ಕಂಥ ವ್ಯಕ್ತಿ ಎಂದು ನಾವೆಲ್ಲಾ ಅರಿತುಕೊಂಡಿದ್ದೇವೆ. 'ನೀವು ಬಂದು ಉದ್ಘಾಟನೆ ಮಾಡಬೇಕೆಂದು' ಕಳೆದ ದಸರಾ ಮಹೋತ್ಸವಕ್ಕೆ ಅವರನ್ನು ಆಹ್ವಾನ ಮಾಡಿದ್ದೆ. ವೈಚಾರಿಕತೆ ಬಗ್ಗೆ ಬಹಳ ಮಾತನಾಡುತ್ತಾರೆ, ಮೌಢ್ಯಗಳ ಬಗ್ಗೆ ಮಾತನಾಡುತ್ತಾರೆ, ಆದರೆ ದಸರಾ ಮಹೋತ್ಸವವನ್ನು ಉದ್ಘಾಟನೆ ಮಾಡುವುದಕ್ಕೆ ಡಾ: ನರಸಿಂಹಯ್ಯನವರು ಹೇಗೆ ಒಪ್ಪಿಕೊಳ್ಳುತ್ತಾರೆಂದು ಸಾರ್ವಜನಿಕವಾಗಿ ಸ್ವಲ್ಪ ಚರ್ಚೆಗಳೂ ಸಹ ಆದವು. ಪೂಜೆಗೆ ಹೇಗೆ ಒಪ್ಪಿಕೊಂಡಿದ್ದಾರೆಂದು ಕೆಲವು ವಿಚಾರವಾದಿಗಳು ಬಹಳ ಟೀಕೆಗಳನ್ನು ಮಾಡಿದರು. ಆ ಸಂದರ್ಭದಲ್ಲಿ ಅವರು ಆ ವಿಚಾರವಾದಿಗಳಿಗೆಲ್ಲಾ ತಕ್ಕ ಉತ್ತರವನ್ನು ಕೊಟ್ಟಿದ್ದರು. ಒಂದು ಪಾರಂಪರಿಕ ಕಾರ್ಯಕ್ರಮಕ್ಕೆ ಒಂದು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ನಾನು ಭಾಗಿಯಾಗುತ್ತಿದ್ದೇನೆಂದೂ, ದಸರಾ ಮಹೋತ್ಸವವು ಒಂದು ಪಾರಂಪರಿಕ ಕಾರ್ಯಕ್ರಮ, ಒಂದು ಐತಿಹಾಸಿಕವಾದಂಥ ಕಾರ್ಯಕ್ರಮ ಮತ್ತು ಅಲ್ಲಿ ಒಂದು ಸಾಂಸ್ಕೃತಿಕ ಕಾರ್ಯಕ್ರಮವಿರುವುದರಿಂದ ನಾನು ಭಾಗಿಯಾಗುತ್ತಿದ್ದೇನೆ, ನಾನು ಬದುಕಿನಲ್ಲಿ ಯಾವತ್ತೂ ಕೂಡ ವಿಚಾರವಾಹಿನಿಯಲ್ಲಿ ಎಲ್ಲೂ ಕೂಡ ನಾನು ದಾರಿತಪ್ಪಿಲ್ಲ ಎನ್ನುವ ಮಾತನ್ನು ಹೇಳಿ ಬೇರೆಯವರಿಗೆಲ್ಲ ಬಾಯಿ ಮುಚ್ಚಿಸತಕ್ಕಂಥ ಕೆಲಸವನ್ನು ಮಾಡಿದರು. ಹಾಗಾಗಿ ಈ ಸಲ ದಸರಾ ಮಹೋತ್ಸವಕ್ಕೆ 'ನಾನು ಬರುತ್ತೇನೆ, ನನಗೆ ಈ ತರಹ ಟೀಕೆ ಬರಬಹುದು, ಆದರೂ ಕೂಡ ನಾನು

ಬಂದೇ ಬರುತ್ತೇನೆ, ಇದೊಂದು ಒಳ್ಳೆಯ ಕೆಲಸವೆಂದು' ಬಂದು ಉದ್ಘಾಟನೆ ಮಾಡತಕ್ಕಂಥ ಕೆಲಸವನ್ನು ಮಾಡಿದರು. ಬಹುಶ: ಈ ಉದ್ಘಾಟನೆಯನ್ನು 4 ತಿಂಗಳ ಹಿಂದೆ ಮಾಡಿದ್ದರು. ಈ 4 ತಿಂಗಳಲ್ಲಿ ಅವರು ನಿಧನರಾಗಿ ನಮ್ಮಿಂದ ದೂರವಾದರಲ್ಲಾ ಎನ್ನುವುದು ಬಹಳ ನೋವಿನ ಸಂಗತಿ. ಇವರ ಬಗ್ಗೆ ಅಪಾರವಾದ ಗೌರವವನ್ನು ನಾನು ಇಟ್ಟುಕೊಂಡಿದ್ದೇನೆ. ಒಬ್ಬ ಶಿಕ್ಷಣ ತಜ್ಞ, ಶಿಕ್ಷಣ ಕ್ಷೇತ್ರಕ್ಕೆ ಅಪಾರವಾದಂಥ ಕೊಡುಗೆಯನ್ನು ಕೊಟ್ಟಿದ್ದಾರೆ ಮತ್ತು ಎಲ್ಲಾ ಹಿಂದುಳಿದವರ ಬಗ್ಗೆ, ದಲಿತರ ಬಗ್ಗೆ, ಶೋಷಣೆಗೆ ಒಳಪಟ್ಟಿರುವವರ ಬಗ್ಗೆ ಅವರಿಗೆ ಸಾಮಾಜಿಕ ನ್ಯಾಯ ಸಿಗಬೇಕೆನ್ನತಕ್ಕಂಥ ವಿಚಾರವನ್ನು ಯಾವತ್ತೂ ಕೂಡ ಇಟ್ಟುಕೊಂಡು ಆ ದಿಕ್ಕಿನಲ್ಲಿ ಕೆಲಸವನ್ನು ಮಾಡಿದಂಥವರು. ಅನೇಕ ಮಾನ್ಯ ಸದಸ್ಯರಿಗೆಲ್ಲಾ ಗೊತ್ತಿರುವ ಹಾಗೆ, ಮೌಢ್ಯಗಳನ್ನು ಯಾರು ಪ್ರತಿಪಾದನೆ ಮಾಡುತ್ತಿದ್ದರು, ಪವಾಡಗಳನ್ನು ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದವರಿಗೆ ಬಹಿರಂಗವಾಗಿ ಸವಾಲು ಹಾಕಿ, ಬಹುಶ: ಸಾರ್ವಜನಿಕ ದೃಷ್ಟಿಯಲ್ಲಿ ಅನೇಕ ಜನ ಟೀಕೆ ಮಾಡಿರಬಹುದು. ಯಾರು ಮೌಢ್ಯಗಳನ್ನು ಒಪ್ಪಿಕೊಂಡಿರುವವರು, ಮೌಢ್ಯಗಳನ್ನು ಪಾಲನೆ ಮಾಡುತ್ತಿರುವ ಬಹಳ ಜನ ವಿಜ್ಞಾನಿಗಳು ಇದ್ದಾರೆ, ವಿಜ್ಞಾನ ಓದಿದವರು ಇದ್ದಾರೆ, ಭೌತಶಾಸ್ತ್ರ ವಿಜ್ಞಾನಿಗಳು ಇರಬಹುದು, ಆದರೆ ವಿಜ್ಞಾನ ಹೇಳುತ್ತಾ ಹೇಳುತ್ತಾ ಜೊತೆ ಜೊತೆಯಲ್ಲೆ ಬದುಕಿನಲ್ಲಿ ಮೌಢ್ಯಗಳನ್ನೂ ಕೂಡ ಆಚರಣೆ ಮಾಡುತ್ತಿರುತ್ತಾರೆ. ಆದರೆ ಯಾವತ್ತೂ ಕೂಡ ವೈಜ್ಞಾನಿಕ ದೃಷ್ಟಿಕೋನ, ವೈಚಾರಿಕ ಮನೋಭಾವಕ್ಕೆ ಬದ್ಧರಾಗಿ ನಡೆದುಕೊಂಡಿರುವವರು, ಆ ಒಂದು ಬದ್ಧತೆ ಇದ್ದದ್ದರಿಂದಲೇ ಪವಾಡಗಳನ್ನು ಮಾಡುವ ಅನೇಕ ಜನರಿಗೆ ಸವಾಲುಗಳನ್ನು ಎಸೆದು, ನನಗೆ ಅದನ್ನು convince ಮಾಡಿ ಎಂದು ಹೇಳುವ ಎದೆಗಾರಿಕೆಯನ್ನು ತೋರಿಸುತ್ತಿದ್ದರು. ಅದರಲ್ಲಿ ಅವರಿಗೆ ಬಹಳ ಸ್ಪಷ್ಟವಾದ ನಂಬಿಕೆ ಇತ್ತು, ಈ ಪವಾಡಗಳಲ್ಲಿ, ಮೌಢ್ಯಗಳಲ್ಲಿ, ಕಂದಾಚಾರಗಳಲ್ಲಿ ಏನೂ ಸತ್ಯವಿಲ್ಲ, ಅದರಲ್ಲಿ ಯಾವುದೇ ಮಾನವೀಯ ಮೌಲ್ಯಗಳಿಲ್ಲ, ಅದು ಜನರನ್ನು ದಾರಿ ತಪ್ಪಿಸತಕ್ಕಂಥ ಕೆಲಸ, ಸಮಾಜವನ್ನು ದಾರಿ ತಪ್ಪಿಸತಕ್ಕಂಥ ಕೆಲಸ ಎಂಬುದರಲ್ಲಿ ಬಹಳ ಸ್ಪಷ್ಟವಾಗಿ ನಂಬಿಕೆಯನ್ನು ಇಟ್ಟುಕೊಂಡಿದ್ದರು. ಅವರು ಜೀವನದುದ್ದಕ್ಕೂ ಅದೇ ರೀತಿ ಬದುಕಿದರು. ಆ ಕಾರಣದಿಂದ ಇಡೀ ಸಮಾಜಕ್ಕೆ ಅವರ ವಿಚಾರಗಳು ಮಾರ್ಗದರ್ಶನವಾಗುತ್ತವೆ, ಎಲ್ಲರಿಗೂ ಕೂಡ ಅವರು ಮಾರ್ಗದರ್ಶಕರಾಗಿದ್ದರು ಎನ್ನುವುದನ್ನು ನಾವು ನೆನಸಿಕೊಳ್ಳಬೇಕಾಗುತ್ತದೆ. ಅಂತಹ ಒಬ್ಬ ತುಂಬು ಜೀವನವನ್ನು ಮಾಡಿದಂತಹ ಒಬ್ಬ ವ್ಯಕ್ತಿ ಇವತ್ತು ನಮ್ಮನ್ನು ಅಗಲಿದ್ದಾರೆ. ಈ ರಾಜ್ಯಕ್ಕೆ, ನಮ್ಮ ಸಮಾಜಕ್ಕೆ ಬಹಳಷ್ಟು ತುಂಬಲಾರದ ನಷ್ಟವಾಗಿದೆ ಎಂದು ನಾನು ಭಾವಿಸುತ್ತೇನೆ. ಏಕೆಂದರೆ, ಇವರು ಮದುವೆಯನ್ನೇ ಆಗಿರಲಿಲ್ಲ. ಯಾವತ್ತೂ ಸ್ವಂತ ಆಸೆಯನ್ನು ಇಟ್ಟುಕೊಂಡವರೇ ಅಲ್ಲ. ಅವರ ಮನೆ, ಮಕ್ಕಳು, ಮರಿ ಯಾವುದಕ್ಕೂ ಬದುಕಿನಲ್ಲಿ ಇಟ್ಟುಕೊಂಡವರಲ್ಲ. ನಿಸ್ವಾರ್ಥ ಜೀವನವನ್ನು ಮಾಡಿ ಇಡೀ ಸಮಾಜಕ್ಕೆ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದಂತಹವರು. ಆ ಕಾರಣಕ್ಕೋಸ್ಕರವೇ ಇವತ್ತು ಅವರಿಗೆ ಗೌರವ ತೋರಿಸಲಿಕ್ಕೋಸ್ಕರವಾಗಿ ಈ

ಸದನವನ್ನು ಇವತ್ತು ಒಂದು ದಿನ ಮುಂದಕ್ಕೆ ಹಾಕಬೇಕೆನ್ನುವ ನಿರ್ಣಯ ಮಾಡಲಾಗಿದೆ. ಬಹುಶ: ಅದೊಂದು ಈ ಸದನ ತೋರಿಸತಕ್ಕಂಥ ದೊಡ್ಡ ಗೌರವ ಎಂದು ಹೇಳಿ ಭಾವಿಸಿಕೊಳ್ಳುತ್ತೇನೆ. ಆದುದರಿಂದ ವಿಶೇಷ ಸಂದರ್ಭವೆಂದು ತಿಳಿದು, ಅವರ ಆತ್ಮಕ್ಕೆ ಶಾಂತಿ ದೊರಕಲಿ, ಅವರ ಕುಟುಂಬ ವರ್ಗದವರಿಗೆ ಅವರ ಸಾವಿರ ದು:ಖ ಭರಿಸತಕ್ಕಂಥ ಶಕ್ತಿಯನ್ನು ಯಾರೇ ಇರಲಿ, ಯಾರಾದರೂ ಇರಬಹುದು, ನಾವೇ ಇಡೀ ಸಮಾಜವೇ ಅವರ ಕುಟುಂಬವರ್ಗವೆಂದು ಭಾವಿಸಿಕೊಂಡು, ಇಡೀ ಸಮುದಾಯವೇ ಅವರ ಕುಟುಂಬವರ್ಗ ಎಂದು ಹೇಳಿ, ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಹೇಳಿ, ಅವರ ನಿಧನದಿಂದ ಆಗಿರುವ ನಷ್ಟವನ್ನು ಭರಿಸುವ ಶಕ್ತಿ ಅವರ ಕುಟುಂಬವರ್ಗದವರಿಗೆ ಬರಲಿ ಎಂದು ಆಶಿಸಿ, ನಿಮ್ಮ ಜೊತೆಯಲ್ಲಿ ಸಂತಾಪ ಸೂಚನೆಯನ್ನು ಅನುಮೋದನೆ ಮಾಡುತ್ತಿದ್ದೇನೆ. ಜೊತೆಗೆ ಸಿ. ನಾಗರಾಜ್ ಅವರು ಕರ್ನಾಟಕದಲ್ಲಿ ಕ್ರಿಕೆಟ್ ಬೆಳವಣಿಗೆಗಾಗಿ ಅಪಾರವಾದ ಕೆಲಸ ಮಾಡಿದಂತಹವರು. 20 ವರ್ಷಗಳ ಕಾಲ ಕರ್ನಾಟಕ ಕ್ರಿಕೆಟ್ ಸಂಸ್ಥೆಯ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದರು. ಅನೇಕ ಅಧ್ಯಕ್ಷರ ಕೈಕೆಳಗೆ ಅವರು ಕೆಲಸ ಮಾಡಿದ್ದರು. ಆದರೆ ನೇರವಾಗಿ ಅಲ್ಲಿಯ ಎಲ್ಲಾ ಕೆಲಸಗಳನ್ನು ಮಾಡಿಸಿದವರಾಗಿದ್ದಾರೆ. ರಾಜ್ಯ ಸರ್ಕಾರದಿಂದ ಆ ಜಾಗವನ್ನು ಪಡೆದುಕೊಂಡು, ಇವತ್ತೇನು ಆ ಸ್ಟೇಡಿಯಂ ಇದೆಯಲ್ಲಾ, ಆ ಸ್ಟೇಡಿಯಂ ಬರಲಿಕ್ಕೆ, ಅದೊಂದು ಟೆಸ್ಟ್ ಕೇಂದ್ರವಾಗಲಿಕ್ಕೆ, ಒನ್‌ಡೇ ಮ್ಯಾಚ್ ನಡೆಯಲಿಕ್ಕೆ ನಾಗರಾಜ್‌ರವರು ಕಾರಣಕರ್ತರೆಂದು ಹೇಳಿದರೆ ಅದು ಅತಿಶಯೋಕ್ತಿ ಯಾಗಲಾರದು ಎಂಬುದು ನನ್ನ ಭಾವನೆ. ಬರೀ ಕರ್ನಾಟಕ ಕ್ರಿಕೆಟ್ ಅಷ್ಟೇ ಅಲ್ಲ, ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯಲ್ಲೂ ಕೂಡ ಎರಡು ವರ್ಷಗಳ ಕಾಲ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದರು. ಕೊನೆಗೆ ಅಲ್ಲಿ ಸರ್ಕಾರ ಜಮೀನನ್ನೆಲ್ಲಾ ಕ್ರಿಕೆಟ್ ಸ್ಟೇಡಿಯಂಗೆ ಕೊಡಬೇಕಾದರೆ, ಇನ್ನೊಂದು ಸ್ವಲ್ಪ ಸ್ವಿಮ್ಮಿಂಗ್ ಪೂಲ್ ಇತ್ಯಾದಿ ಜಾಗವೆಲ್ಲಾ ಉಳಿದಿತ್ತು. ಅವರು ಆ ಬಗ್ಗೆ ಸರ್ಕಾರದ ಜೊತೆಗೆ ಮಾತನಾಡಿ, ಆ ಜಾಗವನ್ನು ಪಡೆದುಕೊಳ್ಳಲು ಆಜ್ಞೆಯಾಗುವವರೆಗೆ ನಿರಂತರ ಪ್ರಯತ್ನ ಮಾಡಿ ಯಶಸ್ವಿಯಾದರು. ಕರ್ನಾಟಕ ಕ್ರಿಕೆಟ್‌ಗೆ ಅವರು ಅಪಾರವಾದ ಕೊಡುಗೆಯನ್ನು ಸಲ್ಲಿಸಿದ್ದಾರೆ. ಹಾಗಾಗಿ ಕ್ರಿಕೆಟ್ ಕ್ಷೇತ್ರಕ್ಕೆ ಮತ್ತು ರಾಜ್ಯಕ್ಕೆ ಅವರ ಸಾವಿನಿಂದ ನಷ್ಟವಾಗಿದೆ ಎಂದು ಹೇಳಿ, ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ, ಅವರ ಕುಟುಂಬ ವರ್ಗದವರಿಗೆ ಅವರ ಸಾವಿನ ದು:ಖವನ್ನು ಭರಿಸುವ ಶಕ್ತಿ ದೊರಕಲೆಂದು ನಾನು ಪ್ರಾರ್ಥಿಸಿ, ಈ ಸಂತಾಪ ಸೂಚಕ ನಿರ್ಣಯವನ್ನು ಬೆಂಬಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ನರಸಿಂಹಯ್ಯನವರು ಇವತ್ತೇನೆ ಕಣ್ಮರೆಯಾಗಿದ್ದಾರೆ, ಅವರಿಗೆ ನಾನೂ ಕೂಡ ನನ್ನ ಪರವಾಗಿ ಮತ್ತು ನನ್ನ ಪಕ್ಷದ ಪರವಾಗಿ ಶ್ರದ್ಧಾಂಜಲಿಗಳನ್ನು ಅರ್ಪಿಸುತ್ತೇನೆ. ಅವರ ಸೇವೆಯನ್ನು ನಾವ್ಯಾರೂ ಯಾವತ್ತೂ ಮರೆಯಲಿಕ್ಕಾಗುವುದಿಲ್ಲ. ಅದರಲ್ಲೂ

ನ್ಯಾಷನಲ್ ಹೈಸ್ಕೂಲ್, ನ್ಯಾಷನಲ್ ಕಾಲೇಜುಗಳನ್ನು ಅವರು ಕಟ್ಟಬೇಕಾದರೆ ಪಟ್ಟ ಶ್ರಮ ಮತ್ತು ವಿದ್ಯಾರ್ಥಿಗಳನ್ನು ಅವರೇ ಸ್ವಂತ ಇಟ್ಟುಕೊಂಡು, ಓದಿಸುತ್ತಿದ್ದಂತಹ ಜೀವನವನ್ನು ಯೋಚನೆ ಮಾಡಿದರೆ, ಬಹುಶ: ಇಡೀ ನಾಡೇ ನನ್ನದು, ಕರ್ನಾಟಕ ರಾಜ್ಯವೇ ನನ್ನದು ಎಂದು ಹೇಳಿ ಬದುಕಿದ್ದಂತಹವರು. ಅಂತಹವರು ಇವತ್ತು ನಮ್ಮ ಮಧ್ಯೆ ಇಲ್ಲ. ಈ ನಾಡು ಬರಿದಾಯಿತು ಎಂದು ಹೇಳುತ್ತಾ, ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ ಹಾಗೆ, ದೇವರು, ಸಂಪ್ರದಾಯ, ಮೂಢನಂಬಿಕೆ ಬಗ್ಗೆ ನರಸಿಂಹಯ್ಯನವರು ಮತ್ತು ಕೋವೂರ್‌ರವರನ್ನು ಯಾರೂ ಮರೆಯಲಿಕ್ಕೆ ಆಗುವುದೇ ಇಲ್ಲ. ಯಾರಾದರೂ ಏನಾದರೂ ನಾನು ಮಾಂತ್ರಿಕ ಶಕ್ತಿಯಿಂದ ಅಥವಾ ದೈವತ್ವದಿಂದ ಮಾಡುತ್ತೇನೆ ಎಂದು ಹೇಳಿದರೆ, ಎದಿರೇಟು ಹಾಕುತ್ತಿದ್ದಂಥವರಲ್ಲಿ ಈ ಭಾಗದಲ್ಲಿ ಡಾ: ನರಸಿಂಹಯ್ಯ ಮತ್ತು ಡಾ: ಕೋವೂರ್ ಇವರಿಬ್ಬರೇ ಇಬ್ಬರು. ನರಸಿಂಹಯ್ಯನವರಿಗೆ ಇದಕ್ಕೆ ತಕ್ಷಣ ಉತ್ತರ ಹೇಳುವಂತಹ ಸ್ಥಿತಿ ಹೇಗೆ ಬರುತ್ತದೆಂದು ನಮಗೆಲ್ಲಾ ಆಗ ಬಹಳ ಆಶ್ಚರ್ಯವಾಗುತ್ತಿತ್ತು. ಅಷ್ಟೊಂದು ವೈಜ್ಞಾನಿಕವಾಗಿ ತಿಳಿದುಕೊಂಡು, ವಿಚಾರವಂತರಾಗಿದ್ದರು ಇವತ್ತು ಅವರ ಕಳೇಬರ ಬೆಂಗಳೂರಿನಲ್ಲೇ ಇದೆ. ಹಾಗಾಗಿ ಸನ್ಮಾನ್ಯ ಮುಖ್ಯಮಂತ್ರಿಗಳೇನು ಇವತ್ತು ಸಭೆಯನ್ನು ಮುಂದಕ್ಕೆ ಹಾಕಬಹುದು ಎಂಬ ತೀರ್ಮಾನವನ್ನೇನು ತೆಗೆದುಕೊಂಡಿದ್ದಾರೋ, ಅದನ್ನು ನಾವೂ ಅನುಮೋದಿಸಿ, ಅವರ ಆತ್ಮಕ್ಕೆ ಶಾಂತಿ ಸಿಗಲಿ, ಅವರ ಕುಟುಂಬ ಇಲ್ಲದಿದ್ದರೂ ಪರವಾಗಿಲ್ಲ, ನಾವೆಲ್ಲಾ ಅವರು ಬೆಳೆಸಿದವರು ಎಂದು ಅಂದುಕೊಳ್ಳುತ್ತೇವೆಂದು ಹೇಳಿ ಇನ್ನು ಸಿ. ನಾಗರಾಜ್‌ರವರು, ನಾನು ಮತ್ತು ವಾಟಾಳ್ ನಾಗರಾಜ್ ರವರು ಸಭೆಯಲ್ಲಿ ಕಳೆದ ಬಾರಿ ಪ್ರಸ್ತಾಪ ಮಾಡಿದ್ದೆವು, ನಾವು ಅವರನ್ನು ಜೀವಂತವಾಗಿದ್ದಾಗಲೇ ಕೊಂದು ಬಿಟ್ಟಿದ್ದೇವೆನೋ ಎಂಬ ಭಾವನೆ ನಮಗೆ ಬರುತ್ತದೆ. ಅಂತಹ ಒಂದು ದೊಡ್ಡ ಸಂಸ್ಥೆಯನ್ನು ಕಟ್ಟಿ ಇಡೀ ಕ್ರಿಕೆಟ್ ಕ್ಷೇತ್ರಕ್ಕೆ ಕರ್ನಾಟಕದಲ್ಲಿ ಮತ್ತು ಭಾರತದ ಮಟ್ಟದಲ್ಲಿ ಹೆಸರನ್ನು ತಂದು ಕೊಟ್ಟು, ಯಾರ್‍ಯಾರನ್ನು ಅವರು ಬೆಳೆಸಿದ್ದರೋ, ಅವರೇ ಅವರ ಕಾಲು ಹಿಡಿದು ಕಳೆಯುವಂತಹ ಸ್ಥಿತಿಗೆ ತಂದು, ಸಾಯುವ ಕಾಲದಲ್ಲಿ ಅವರು ಬಹಳ ಕೊರಗಿ ಸತ್ತರು ಎಂಬುದು ನಮಗೆಲ್ಲಾ ನೋವು ತರುವಂತಹ ವಿಷಯವಾಗಿದೆ. ನಾವು ಅವರ ಬಗ್ಗೆ ಸಿ.ಓ.ಡಿ. ಎನ್‌ಕ್ವೈರಿ ಆಗಬೇಕು ಎಂದು ಒಂದು ಸಲ ಮಾತನಾಡಿದ್ದೆವು. ನಾಗರಾಜ್‌ರಂತಹವರ ಮೇಲೆ, ತಿಮ್ಮಪ್ಪಯ್ಯನಂತಹವರ ಮೇಲೆ ಸರ್ಕಾರ ಎನ್‌ಕ್ವೈರಿಗೆ ಆರ್ಡರ್ ಮಾಡುತ್ತಾ ಹೋದರೆ, ನಾಳೆ ಈ ಕ್ಷೇತ್ರಗಳಲ್ಲಿ ಕೆಲಸ ಮಾಡಲಿಕ್ಕೆ ಯಾರೂ ಬರುವುದೇ ಇಲ್ಲ. ರಾಜಕಾರಣಿಗಳು ಬಂದು ಹೋಗಬಹುದು, ಸಂಘ ಸಂಸ್ಥೆಗಳನ್ನು ಕಟ್ಟುವವರು, ಅದರಲ್ಲೂ ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್‌ನಂತಹ ಒಂದು ಬೃಹತ್ ಸಂಸ್ಥೆ ಕಟ್ಟುವವರನ್ನು ನಾವು ಈ ಇಕ್ಕಟ್ಟಿನಲ್ಲಿ ನಾವು ಸಿಕ್ಕಿಸಬಹುದೇ? ಸಾಯಬೇಕಾದರೆ ಅವರೇನು ಯಾತನೆ ಪಟ್ಟರು, ಬಹುಶ: ಅದಕ್ಕೆ ಪರೋಕ್ಷವಾಗಿ ನಾವೆಲ್ಲಾ ಯಾವುದೇ ರೀತಿಯಲ್ಲಿ

ಕಾರಣ ಇರಬಹುದೇನೋ ಎಂಬ ಅಳುಕು ನಮ್ಮೆಲ್ಲರ ಮನಸ್ಸಿನಲ್ಲಿ ಉಳಿದಿದೆ. ಆದರೂ ಈ ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್‌ಗೆ ಮತ್ತು ಇಡೀ ಕ್ರೀಡಾ ಕ್ಷೇತ್ರಕ್ಕೆ ಅವರು ಮಾಡಿರುವ ಸೇವೆಯನ್ನು ನಾವೆಲ್ಲಾ ಮನಗಾಣಬೇಕಾಗಿದೆ. ಅವರ ಆತ್ಮಕ್ಕೆ ಶಾಂತಿ ಸಿಕ್ಕಲಿ, ಅವರ ಕುಟುಂಬದವರಿಗೆ ಆ ದು:ಖ ಭರಿಸುವಂತಹ ಶಕ್ತಿಯನ್ನು ಭಗವಂತ ಕೊಡಲೆಂದು ಹೇಳಿ ನನ್ನ ಪಕ್ಷದ ಪರವಾಗಿ ಪ್ರಾರ್ಥಿಸಿ, ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ತಾವು ತಂದಿರುವ ಈ ಇಬ್ಬರು ಗಣ್ಯ ವ್ಯಕ್ತಿಗಳ ನಿಧನದ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಸಂಪೂರ್ಣವಾದ ಬೆಂಬಲವನ್ನು ನೀಡುತ್ತಾ, ಡಾ: ಹೆಚ್. ನರಸಿಂಹಯ್ಯನವರು ಕರ್ನಾಟಕದ ಒಂದು ದೊಡ್ಡ ಧ್ರುವತಾರೆ. ಕರ್ನಾಟಕದ ಇತಿಹಾಸದಲ್ಲಿ ನರಸಿಂಹಯ್ಯನವರ ಯುಗ ಅಂತ್ಯವಾಯಿತು. ಅವರನ್ನು ನಾನು ಇವತ್ತಿನ ದಿವಸ ಯುಗ ಪುರುಷ ಎಂದು ಕರೆಯುತ್ತೇನೆ. ಬಹುಶ: ಶಿಕ್ಷಣ ಕ್ಷೇತ್ರದಲ್ಲಿ ಗಾಂಧಿ, ಮೂಢ ನಂಬಿಕೆಗಳ ವಿರುದ್ಧ ವಿಚಾರವಂತರಲ್ಲಿ ಕರ್ನಾಟಕದ ಪೆರಿಯಾರ್, ತಮಿಳುನಾಡಿನಲ್ಲಿ ಪೆರಿಯಾರ್ ಏನೊಂದು ದೊಡ್ಡ ಕ್ರಾಂತಿಯನ್ನು ಮಾಡಿದ್ದರೋ, ಅದನ್ನು ನರಸಿಂಹಯ್ಯನವರು ಕರ್ನಾಟಕದಲ್ಲಿ ಮಾಡಿದರು. ಮಾನ್ಯ ನರಸಿಂಹಯ್ಯನವರು ನನಗೆ ಬಹಳ ಅತ್ಯಂತ ನಿಕಟವಾದಂತಹ ಸಂಬಂಧ ಇದ್ದವರು. ಕನ್ನಡದ ಬಗ್ಗೆ, ಕನ್ನಡ ಭಾಷೆಯ ಬಗ್ಗೆ, ಕನ್ನಡ ಭಾಷಾ ಬೆಳವಣಿಗೆಯ ಬಗ್ಗೆ ಅಪಾರವಾದ ಅಭಿಮಾನ, ಪ್ರೀತಿ, ವಿಶ್ವಾಸಗಳನ್ನು ಇಟ್ಟುಕೊಂಡಿದ್ದವರು ಆಗಿದ್ದರು. ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದಾರೆ. ವಿಧಾನ ಪರಿಷತ್ತಿಗೆ, ಗುಂಡುರಾಯರು ಮುಖ್ಯಮಂತ್ರಿಯಾಗಿದ್ದಾಗ ಅವರನ್ನು ನಾಮಕರಣ ಮಾಡಿದಾಗ ಅವರು ಒಂದು ಷರತ್ತು ಹಾಕಿದ್ದರು. ನನ್ನನ್ನು ನೀವು ನಾಮಕರಣ ಮಾಡುತ್ತಿದ್ದೀರಿ ಆದರೆ ನಾನು ಸರ್ಕಾರದ ಪರವಾಗಿ ಮಾತನಾಡುವುದಿಲ್ಲ, ನಾನು ಇಲ್ಲಿ ಸರ್ಕಾರದ ವಿರುದ್ಧ ಮಾತನಾಡಬೇಕಾಗಿ ಬರಬಹುದು, ಆದರೆ ವಿನಾಕಾರಣ ಮಾತನಾಡುವುದಿಲ್ಲ, ಆ ಷರತ್ತಿನ ಮೇಲೆ ಇರುವುದಾದರೆ ನನ್ನನ್ನು ನಾಮಕರಣ ಮಾಡಿ, ಇಲ್ಲದೇ ಹೋದರೆ ನಾನು ಖಂಡಿತವಾಗಿ ನೀವು ನಾಮಕರಣ ಮಾಡಿದ್ದೀರಿ ಎಂದು ಸರ್ಕಾರವನ್ನು ಹೊಗಳಿಕೊಂಡು ಹೋಗತಕ್ಕಂಥ ವ್ಯಕ್ತಿ ನಾನು ಅಲ್ಲ, ಎಂದು ನೇರವಾಗಿ ಹೇಳಿದ್ದರು. ಅಷ್ಟೇ ಸ್ಪಷ್ಟವಾಗಿ ಗುಂಡೂರಾಯರು ಹೇಳಿದರು, ನೀವು ಏನು ಬೇಕಾದರೂ ಮಾತನಾಡಬಹುದು ನಿಮಗೆ ಸ್ವಾತಂತ್ರ್ಯ ಇದೆ, ನಾವು ನಿಮ್ಮನ್ನೆ ನಾಮಕರಣ ಮಾಡುತ್ತೇವೆಂದು ಹೇಳಿದರು. ಉದಾತ್ತವಾದಂಥ ಅಪಾರವಾದಂಥ ಶಕ್ತಿ ಇಟ್ಟುಕೊಂಡಿದ್ದರು. ಬಹುಶ: ಅವರು ದೇವಸ್ಥಾನಗಳಿಗೆ ಹೋಗುತ್ತಿರಲಿಲ್ಲ. ತೀರ್ಥ ಪ್ರಸಾದ ಅವರು ಸ್ವೀಕರಿಸುತ್ತಿರಲಿಲ್ಲ, ಅವರಿಗೂ ಸಾಯಿ ಬಾಬರವರಿಗೆ ಬಾರಿ ದೊಡ್ಡ ಇತಿಹಾಸ ನಡೆಯಿತು. ಸಾಯಿಬಾಬರವರು ಬೂದಿ ಕೊಟ್ಟರೆ ಇವರು

ಕುಂಬಳಕಾಯಿ ಏಕೆ ಕೊಡಬಾರದು ಅನ್ನುವರು. ಕುಂಬಳ ಕಾಯಿ ಕೊಡಲಿ, ಇಷ್ಟು ದಪ್ಪ ಕುಂಬಳಕಾಯಿ ಕೊಡಲಿ ಎಂದು ಹೇಳುತ್ತಿದ್ದರು. ಈ ರೀತಿ ಅನೇಕ ವಿಚಾರಗಳ ಬಗ್ಗೆ ಒಂದು ಸಮಗ್ರ ಕ್ರಾಂತಿಯನ್ನೇ ಕರ್ನಾಟಕದಲ್ಲಿ ನಡೆಸಿದರು. ಆದರೆ ಕೊನೆಯಲ್ಲಿ ದಸರಾ ವಸ್ತು ಪ್ರದರ್ಶನಕ್ಕೆ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಹೋದರು. ಕೊನೆಗೆ ಎಲ್ಲೋ ಒಂದು ರೀತಿಯಲ್ಲಿ ಸಣ್ಣ ಹೊಂದಾಣಿಕೆಯನ್ನು ಅವರು ಮಾಡಿಕೊಂಡರು ಎಂದು ಕಾಣುತ್ತದೆ ಇದರ ಬಗ್ಗೆ ಅವರನ್ನು ಕೆಲವರು ಪ್ರಶ್ನೆ ಕೇಳಿದಾಗ ಅವರ ಸ್ಪಷ್ಟತೆ ಇರಲಿಲ್ಲ. ಅದರ ಬಗ್ಗೆ ಸರಿಯಾದ ಸ್ಪಷ್ಟವಾದಂಥ ಉತ್ತರ ಕೊಡಲಿಲ್ಲ, ನೀವು ಅಲ್ಲಿ ಚಾಮುಂಡೇಶ್ವರಿ ದಸರಾ ಉತ್ಸವಕ್ಕೆ ಚಾಮುಂಡೇಶ್ವರಿ ಪೂಜೆ ಮಾಡಿ ಅಲ್ಲಿಂದ ಚಾಲನೆ ಕೊಡುವುದಕ್ಕೆ ನೀವು ಹೋಗುತ್ತಿದ್ದೀರಿ, ಇದುವರೆವಿಗೂ ನೀವು ದೇವರ ಹತ್ತಿರಕ್ಕೆ ಹೋಗಲಿಲ್ಲ, ತೀರ್ಥ ತೆಗೆದುಕೊಳ್ಳಲಿಲ್ಲ, ಇಷ್ಟೆಲ್ಲಾ ಇದ್ದಂಥವರು ನೀವು ಏತಕ್ಕೆ ಹೋದಿರಿ ಎಂದು ಕೇಳಿದರೆ. ಪರಿಸ್ಥಿತಿ, ಅಂತೂ, ಅವರ ಮಾತಿನಲ್ಲಿ ಸ್ಪಷ್ಟತೆ ಇರಲಿಲ್ಲ, ಮಾನ್ಯ ಪ್ರಕಾಶ್‌ರವರೇ, ಅವರ ಕೊನೆಯ ಮಾತಿನಲ್ಲಿ ಸ್ಪಷ್ಟತೆ ಇರಲಿಲ್ಲ ಅಲ್ಲವೆ? ಅವರು ತೀರಾ ಶಕ್ತಿಹೀನರಾಗಿ, ತಮ್ಮ ಚಿಂತನೆಯನ್ನು ಧಾಟಿ ಹೋದಾಗ ಈ ಒಂದು ನಿರ್ಧಾರಕ್ಕೆ ಅವರು ಬಂದರು ಎಂದು ನನಗೆ ಅನ್ನಿಸುತ್ತದೆ. ಆದರೆ ಇಡೀ ಜೀವನದ ಉದ್ದಕ್ಕೂ ಇಂಥ ವಿಚಾರ, ನಮ್ಮ ಕರ್ನಾಟಕದಲ್ಲಿಯೇ ವಿಚಾರವಂತರ ಪೈಕಿನಲ್ಲಿ ಬಹಳ ಎತ್ತರವಾದಂಥ, ಉನ್ನತವಾದಂಥ ವ್ಯಕ್ತಿ. ಈಗ ನಾವು ಅವರಿಗೆ ಮಾಡಬೇಕಾದಂಥ ಅತ್ಯಂತ ಒಂದು ಉತ್ತಮವಾದಂಥ ಕೆಲಸ ಎಂದು ಹೇಳಿದರೆ, ಒಂದು ಸಮಿತಿಯನ್ನು ರಚನೆ ಮಾಡಿ, ಅವರಿಗೆ ಉನ್ನತವಾದಂಥ ಒಂದು ಸ್ಮಾರಕವನ್ನು ಕರ್ನಾಟಕದಲ್ಲಿ ನಿರ್ಮಾಣ ಮಾಡಬೇಕಾಗಿದೆ. ಉನ್ನತವಾದಂಥ ಒಂದು ಸ್ಮಾರಕ, ಈ ಸ್ಮಾರಕ ಹೇಗಿರಬೇಕು ಎನ್ನುವ ಬಗ್ಗೆ ಒಂದು ಸದನದ ಸಮಿತಿಯನ್ನು ಮಾಡಿ ಅದರಲ್ಲಿ ಎರಡೂ ಸದನದ ಸದಸ್ಯರನ್ನು ಬೇಕಾದರೆ ಸೇರಿಸಬಹುದು. ಹಾಗೆ ಒಂದು ಸಮಿತಿಯನ್ನು ರಚನೆ ಮಾಡಿ, ಅವರು ಶಿಕ್ಷಣ ಕ್ಷೇತ್ರಕ್ಕೆ ಮಾಡಿರತಕ್ಕಂಥ ಕೆಲಸ, ಕನ್ನಡಕ್ಕೆ ಮಾಡಿರತಕ್ಕಂಥ ಕೆಲಸ, ವಿಚಾರವಂಥರಾಗಿ ಮಾಡಿರತಕ್ಕಂಥ ಕೆಲಸ, ಮೂಢ ನಂಬಿಕೆಗಳ ವಿರುದ್ಧ ಮಾಡಿರತಕ್ಕಂಥ ಕೆಲಸ, ಇಂಥ ಅನೇಕ ವಿಚಾರಗಳ ಬಗ್ಗೆ ನಾವು ಸಮಗ್ರವಾದಂಥ ಚಿಂತನೆಯನ್ನು ಮಾಡಿ, ಸೂಕ್ತವಾದಂಥ ಸ್ಮಾರಕ ಇಡೀ ದೇಶ, ಪ್ರಪಂಚ ನೋಡತಕ್ಕಂಥ ಒಂದು ಸ್ಮಾರಕ ಆಗಬೇಕಾಗಿದೆ. ಅವರು ಬ್ರಹ್ಮಚಾರಿ ಆಗಿದ್ದರು, ಯಾವುದೇ ಆಶೋತ್ತರುಗಳು ಇರಲಿಲ್ಲ, ಆದುದರಿಂದ ಎಲ್ಲವನ್ನೂ ಬಿಟ್ಟು ನಿಂಥಂಥ ಒಬ್ಬ ಮೇರು ವ್ಯಕ್ತಿ, ಮಹಾನ್ ವ್ಯಕ್ತಿ, ಅವರ ನಿಧನ ನನಗೆ ತುಂಬಾ ನೋವಾಗಿದೆ. ಅಂಥ ವಿಚಾರವಂಥವರಿಗೆ ಎಲ್ಲೋ ಒಂದು ಕಡೆ ಈ ಮೂಢ ನಂಬಿಕೆಗಳು ಇಷ್ಟೊಂದು ಭಯಬೀತಿ ಇಲ್ಲದೆ ಸಾರೋದ್ಧಾರವಾಗಿ ನಡೆಯತಕ್ಕಂಥ ಈ ಸಂದರ್ಭದಲ್ಲಿ ನರಸಿಂಹಯ್ಯನವರ ನಿಧನ ನಿಜಕ್ಕೂ ಅತ್ಯಂತ

ನೋವಿನ ಪ್ರಸಂಗ. ಮತ್ತೊಬ್ಬ ನರಸಿಂಹಯ್ಯ ಇಲ್ಲ, ಇನ್ನೊಬ್ಬ ನರಸಿಂಹಯ್ಯನವರನ್ನು ಹೋಲಿಕೆ ಮಾಡತಕ್ಕಂಥ ವ್ಯಕ್ತಿ ಇಲ್ಲ. ಆದುದರಿಂದ, ನಾನು ನರಸಿಂಹಯ್ಯನವರನ್ನು ಬಹಳ ಮೆಚ್ಚಿದ್ದೇನೆ, ಅವರ ಆದರ್ಶಗಳು ಉಳಿಯಬೇಕಾಗಿದೆ, ಅವರ ಆದರ್ಶಗಳು ಉಳಿಸುವುದಕ್ಕೋಸ್ಕರವಾಗಿ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆ ಮಾಡಿ, ಆ ಸಮಿತಿಯನ್ನು ತಾವು ಈ ಸದನದಲ್ಲಿ ರಚನೆ ಮಾಡಿ, ಅದನ್ನು ಪ್ರಕಟಣೆ ಮಾಡಿ, ಸಮಿತಿಯ ಮೂಲಕ ಯಾವ ಸ್ಮಾರಕ ಮಾಡಬೇಕು ಎಂಬುದನ್ನು ನಿರ್ಧರಿಸೋಣ. ಬಹುಶ: ಇಡೀ ದೇಶದ ಯಾರೇ ಬಂದರೂ ನರಸಿಂಹಯ್ಯನವರ ಒಂದು ಸ್ಮಾರಕಕ್ಕೆ ಹೋಗಬೇಕು, ನೋಡಬೇಕು, ಭೇಟಿ ಮಾಡಬೇಕು ಎನ್ನುವ ಹಾಗೆ ಮಾಡಬೇಕಾಗುತ್ತದೆ, ಆ ದೃಷ್ಟಿಯಿಂದ ನಾವು ಅವರ ಆತ್ಮಕ್ಕೆ ಶಾಂತಿಯನ್ನು ಕೋರುವುದರ ಜೊತೆಗೆ ನಿರಂತರವಾಗಿ ಅವರ ಇತಿಹಾಸ, ಅವರು ಮಾಡಿದಂಥ ಕೆಲಸಗಳು, ಅವರು ತೋರಿದಂಥ ದಾರಿಗಳು, ಅವರು ನಡೆದಂಥ ಹೋರಾಟ ಇವೆಲ್ಲಕ್ಕೂ ಒಂದು ದಾರಿ ದೀಪವಾಗಿ ಒಂದು ಹೊಸ ಶಕ್ತಿ ಬರುತ್ತದೆ, ಅದಕ್ಕೆ ತಾವು ಅನುವು ಮಾಡಿಕೊಡಬೇಕೆಂದು ಕೇಳಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಶ್ರೀಮಾನ್ ಸಿ. ನಾಗರಾಜ್ ರವರೂ ಕೂಡ ಅಷ್ಟೇ ಎತ್ತರವಾಗಿ ಅವರು ಆ ಕ್ಷೇತ್ರದಲ್ಲಿ ಬೆಳೆದಂಥವರು. ಕ್ರೀಡಾರಂಗದಲ್ಲಿ ಬಹುಶ: ಭಾರತದ ಪ್ರಪಂಚದ ಭೂಪಟದಲ್ಲಿ, ಬೆಂಗಳೂರು ನಗರವನ್ನು ತೋರಿಸಿದಂಥ ಒಬ್ಬ ವ್ಯಕ್ತಿ. ಪ್ರಪಂಚದ ಭೂಪಟದಲ್ಲಿ ಇಡೀ ಪ್ರಪಂಚದ ಎಲ್ಲರೂ, ಪ್ರಪಂಚದ ಯಾವ್ಯಾವ ದೇಶಗಳಿವೆ, ಅವರು ಪ್ರಧಾನಿಯಾಗಿರಬಹುದು, ಅಧ್ಯಕ್ಷರು ಆಗಿರಬಹುದು, ಯಾವುದೇ ವರ್ಗ ಆಗಿರಬಹುದು, ಯಾವುದೇ ಗುಂಪು ಆಗಿರಬಹುದು, ಒಂದು ದಿವಸ ಟೆಸ್ಟ್ ಮ್ಯಾಚ್ ಅದು ಇಡೀ ಪ್ರಪಂಚದ ಎಲ್ಲಾ ಕಡೆ ಟೆಸ್ಟ್ ಮ್ಯಾಚ್ ಆದಂತೆ ಬೆಂಗಳೂರಿನಲ್ಲಿ ಆಗಬೇಕಾಗಿದ್ದರೆ ಅದಕ್ಕೆ ಕಾರಣ ಸಿ. ನಾಗರಾಜ್. ನಾವು ಬಹಳ ಜನ ಸಿ. ನಾಗರಾಜ್ ಅವರಿಂದ ಪಾಸ್ ತೆಗೆದುಕೊಳ್ಳುವಾಗ ಮಾತ್ರ ಗೊತ್ತು. ಬಾರಿ ಜನ ಮಂತ್ರಿಗಳು, ಶಾಸಕರು, ಮಾನ್ಯ ಎಸ್. ನಿಜಲಿಂಗಪ್ಪನವರ ಕಾಲದಿಂದ, ಮಾನ್ಯ ಕೆಂಗಲ್ ಹನುಮಂತಯ್ಯನವರ ಕಾಲದಿಂದ, ಮಾನ್ಯ ಕೆ.ಸಿ. ರೆಡ್ಡಿಯವರ ಕಾಲದಿಂದ, ಮೊದಲು ಕ್ರಿಕೆಟ್ ಮೈದಾನ ಎಲ್ಲಿತ್ತು ಎಂದರೆ, ಸೆಂಟ್ರಲ್ ಕಾಲೇಜ್ ಪಕ್ಕದಲ್ಲಿ... ಅದೇ ಸೆಂಟ್ರಲ್ ಕಾಲೇಜ್ ಕ್ರಿಕೆಟ್ ಮೈದಾನ. ಆಗ ಜಿ.ಬಿ. ಮಲ್ಲಾರಾಧ್ಯ, ಶ್ರೀನಿವಾಸನ್, ಚಿನ್ನಸ್ವಾಮಿ, ಇನ್ನು ಅನೇಕರು, ಶ್ರೀನಿವಾಸನ್, ವಿಜಯ ಪಾರ್ಥಸಾರಥಿ ಕ್ಯಾಪ್ಟನ್, ಇನ್ನು ಅನೇಕರು, ಆದರೆ ಜಿ.ಬಿ. ಮಲ್ಲಾರಾಧ್ಯ ಬಹಳ ಎತ್ತರವಾಗಿ ಕೆಲಸ ಮಾಡಿದಂಥವರು, ಚಿನ್ನಸ್ವಾಮಿ ಬಹಳ ಎತ್ತರವಾಗಿ ಕೆಲಸ ಮಾಡಿದಂಥವರು. ಈ ಚಿನ್ನಸ್ವಾಮಿ ಕ್ರೀಡಾಂಗಣ ಬರಬೇಕಾದರೆ ಸಿ. ನಾಗರಾಜ್, ಸಿ. ನಾಗರಾಜ್ ಇಲ್ಲ ಎಂದರೆ ಸ್ಟೇಡಿಯಂ ಇಲ್ಲ. ಸಿ. ನಾಗರಾಜ್ ಚಿನ್ನಸ್ವಾಮಿ ಇಬ್ಬರೂ ತಂದೆ-ಮಕ್ಕಳು ಇದ್ದ ಹಾಗೆ. ಆ ಮೈದಾನ ದಂಡಿನ

ಪ್ರದೇಶ. ಆಗ ದಂಡಿನ ಮಂತ್ರಿ ಕೃಷ್ಣ ಮೆನನ್, ಆ ದಿನದ ಪರಿಸ್ಥಿತಿಯಲ್ಲಿ ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿ, ನಿಜಲಿಂಗಪ್ಪನವರು ದಂಡಿನ ಮಂತ್ರಿಗಳ ಹತ್ತಿರ ಹೋಗಿ ಆ ಜಾಗ ಬಿಡಿಸಬೇಕಾದರೆ, ಇವರಿಗೋಸ್ಕರ ಚಿನ್ನಸ್ವಾಮಿ, ನಾಗರಾಜ್, ನಿಮ್ಮಿಬ್ಬರ ಶ್ರಮಕ್ಕೋಸ್ಕರ ನಾನು ಜಾಗ ಕೊಡಿಸುತ್ತೇನೆಂದು ಹೇಳಿದರು. ಜಾಗ ಕೊಟ್ಟು ಎಲ್ಲಾ ಅಯಿತು. ನಿಜಲಿಂಗಪ್ಪನವರು ಎಷ್ಟು ದೊಡ್ಡವರು ಎಂದು ನಾವು ಇವತ್ತು ಹೇಳಬೇಕಾದರೆ, ನಿಜಲಿಂಗಪ್ಪನವರ ಹತ್ತಿರ ಹೋಗಿ ಈ ಆಟದ ಮೈದಾನಕ್ಕೆ ಈ ಸ್ಟೇಡಿಯಂಗೆ ತಮ್ಮ ಹೆಸರು ಇಡಬೇಕೆಂದು ಚಿನ್ನಸ್ವಾಮಿ ಹಾಗೂ ನಾಗರಾಜ್‌ರವರು ಹೇಳಿದರು. ಇಲ್ಲ ನನ್ನ ಹೆಸರು ಇಡಕೂಡದು ಅಲ್ಲಿ ಚಿನ್ನಸ್ವಾಮಿ ಹೆಸರು ಇಡಬೇಕೆಂದು ಮಾನ್ಯ ನಿಜಲಿಂಗಪ್ಪನವರು ಹೇಳಿದರು. ಎಷ್ಟು ದೊಡ್ಡ ವ್ಯಕ್ತಿ ಮಾನ್ಯ ನಿಜಲಿಂಗಪ್ಪನವರು. ನನ್ನ ಹೆಸರು ಬೇಡ, ಚಿನ್ನಸ್ವಾಮಿಯವರ ಹೆಸರನ್ನು ಇಡಿ ಎಂದು ಹೇಳಿದರು, ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಹಗಲು ರಾತ್ರಿ ಇಟ್ಟಿಗೆ ಹೊತ್ತಿದ್ದಾರೆ, ಗಾರೆ ಹೊತ್ತಿದ್ದಾರೆ, ಹಗಲು ಕಸ ಹೊಡೆದಿದ್ದಾರೆ, ಹಗಲು ರಾತ್ರಿ ದುಡಿದು, ಕರ್ನಾಟಕದ ಸುಮಾರು 6 ಜನ ಟೆಸ್ಟ್ ಪ್ಲೇಯರ್ಸ್ ಬರಬೇಕಾದರೆ ಸಿ. ನಾಗರಾಜ್‌ರವರೇ ಕಾರಣ ಬೇರೆ ಯಾರೂ ಅದನ್ನು ತಳ್ಳಿಹಾಕುವಂತಿಲ್ಲ, ವಿಶ್ವನಾಥ ಇರಬಹುದು, ಪ್ರಸನ್ನ ಇರಬಹುದು, ಚಂದ್ರಶೇಖರ್ ಇರಬಹುದು, ಕುಂಬ್ಳೆ ಇರಬಹುದು, ಹೀಗೆ ಅನೇಕರನ್ನು ಬೆಳೆಸಿದಂಥ ಶಕ್ತಿ ಸಿ. ನಾಗರಾಜ್, ಸಿ. ನಾಗರಾಜ್ ಸಾವಿನ ಕೊನೆಯ ಕ್ಷಣ, ಕೊನೆಯ ದಿನಗಳು, ಯಾವ ಸಂಸ್ಥೆಯನ್ನು ಕಟ್ಟಿದರು, ಆ ಸಂಸ್ಥೆಯನ್ನು ಕಟ್ಟಿದಂಥವರು ಯಾರನ್ನ ಆ ಸಂಸ್ಥೆಗೆ ತಂದರು, ಯಾವ ಜನರನ್ನು ಬೆಳೆಸಿದರು, ಯಾವ ಜನರನ್ನು ಸೇರಿಸಿದರು, ಯಾವ ಜನರನ್ನು ಸಂಸ್ಥೆಗೆ ನೋಂದಾವಣಿ ಮಾಡಿಸಿದರು, ಅದೇ ಜನ ಅವರನ್ನು ಏಕಾಏಕಿ ಇಡೀ ಜೀವನ ಪರ್ಯಂತ ಅವರನ್ನು ಸದಸ್ಯತ್ವದಿಂದ ಕಿತ್ತು ಹೊರಗೆ ಹಾಕಿದರು. ಅದು ಗುಜರಾತ್ ಸ್ಟೇಡಿಯಂ ಆಗಿದೆ, ಮಾರ್ವಾಡಿಗಳ ಸ್ಟೇಡಿಯಂ ಆಗಿದೆ, ದರೋಡೆಕೋರರ ಸ್ಟೇಡಿಯಂ ಆಗಿದೆ, ಕಳ್ಳಕಾಕರ ಸ್ಟೇಡಿಯಂ ಆಗಿದೆ. ಕುಡುಕರ ಸ್ಟೇಡಿಯಂ ಆಗಿದೆ, ಅಲ್ಲಿ ಬಾರ್ ನಡೆಯುತ್ತಿದೆ, ಇನ್ನೇನು ಅಲ್ಲಿ ನಡೆಯುತ್ತಿಲ್ಲ? ಈ ಬಗ್ಗೆ ಈ ಸದನದಲ್ಲಿ ನಾನು ಮಾನ್ಯ ಮಾಧುಸ್ವಾಮಿ ಹಾಗೂ ಮಾನ್ಯ ರಮೇಶ್ ಕುಮಾರ್‌ರವರು ನಾವು ಎಲ್ಲರೂ ಪ್ರಸ್ತಾಪ ಮಾಡಿದೆವು. ಪ್ರಸ್ತಾಪ ಮಾಡಿದ್ದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಒಂದು ಸಭೆಯನ್ನು ಸಹ ಕರೆದರು. ಆ ಸಭೆಗೆ ಬ್ರಿಜೇಶ್ ಪಟೇಲ್ ಮತ್ತು ಅಲ್ಲಿಯ ಅಧ್ಯಕ್ಷರು ಬಂದಿದ್ದರು, ಮಾನ್ಯ ಪ್ರಕಾಶ್‌ರವರು ಇದ್ದರು, ಎಲ್ಲರೂ ಅವರಿಗೆ ಕೈ ಮುಗಿಯುವುದು ಒಂದು ಬಾಕಿ, ಕನಿಷ್ಠ ಅವರಿಗೆ ಒಂದು ಸದಸ್ಯತ್ವ ಕೊಟ್ಟು ಬಿಡಿ, ಪಾಪ ಅವರಿಗೆ ತೊಂದರೆ ಕೊಡುವುದು ಬೇಡವೆಂದು ನಾವೆಲ್ಲ ಹೇಳಿದೆವು, ಸರ್ಕಾರ ತಕ್ಷಣವೇ ಅಲ್ಲಿಗೆ ಆಡಳಿತಾಧಿಕಾರಿಯನ್ನು ನೇಮಿಸಿ ಇವರೆಲ್ಲರನ್ನೂ ಹೊರ ಹಾಕಬಹುದಾಗಿತ್ತು. ಅದು ಯಾವುದೂ ಮಾಡದೇ, ಅಷ್ಟು ಮುಂದಕ್ಕೆ ಹೋಗಬಾರದು ಎಂದು,

ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು, ಮಾನ್ಯ ಪ್ರಕಾಶ್‌ರವರು ಇದ್ದರು, ಕೈ ಕೈ ಮುಗಿದು ಒಂದು ಸದಸ್ಯತ್ವ ಕೊಟ್ಟು ಬಿಡಿ ಎಂದು ಕೇಳಿದರು. ಇಷ್ಟು ಕೆಲಸ ಮಾಡಿದಂಥವರನ್ನು ಹೊರಗೆ ಹಾಕಿ ಕೊನೆಗೂ ಅವರಿಗೆ ಸದಸ್ಯತ್ವ ಕೊಡಲಿಲ್ಲ. ಜೈಲಿಗೆ ಕಳುಹಿಸಬೇಕು ಎಂದು ಅವರ ಮೇಲೆ ಪಿತೂರಿ ಮಾಡಿ, ಸುಳ್ಳು ಕೇಸ್‌ಗಳನ್ನು ಹಾಕಿದರು, ಕೊನೆಗೆ ಸದಸ್ಯತ್ವ ಸಿಗಲಿಲ್ಲವೆಂದು ಹೇಳಿ, ನೋವಿನಿಂದ ನರಳಿ ಹಾಸಿಗೆ ಹಿಡಿದು ಕೊನೆಯ ಉಸಿರೆಳೆದರು. ಅವರ ಸಾವಿಗೆ ಈಗ ಇರತಕ್ಕಂಥ ಆಡಳಿತ ವರ್ಗವೇ ಕಾರಣವಾಗಿದೆ. ಇದರಲ್ಲಿ ಬೇರೆ ಮಾತಿಲ್ಲ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ನಿಜವಾಗಿಯೂ ಕೂಡ ಅವರ ಆತ್ಮಕ್ಕೆ ಶಾಂತಿ ದೊರೆಯಬೇಕಾದರೆ ಮಾನ್ಯ ಮುಖ್ಯಮಂತ್ರಿಯವರಲ್ಲಿ ಮತ್ತು ಮಾನ್ಯ ಪಿ.ಜಿ.ಆರ್. ಸಿಂಧ್ಯರವರು, ಮಾನ್ಯ ಉಪ ಮುಖ್ಯಮಂತ್ರಿಯವರು ಹಾಗೂ ಮಾನ್ಯ ಎಂ.ಪಿ. ಪ್ರಕಾಶ್‌ರವರಿಗೂ ನಾನು ಹೇಳುವುದೇನೆಂದರೆ, ಮಾನ್ಯ ಸಿ. ನಾಗರಾಜ್‌ರವರ ಮೇಲೆ ನಿಮಗೆ ಹತ್ತಾರು ವರ್ಷಗಳಿಂದ ಬಾಂಧವ್ಯ ಇತ್ತೆಂದರೆ ಈ ಕೂಡಲೇ ಅಲ್ಲಿಗೆ ಒಬ್ಬ ಆಡಳಿತಾಧಿಕಾರಿಯನ್ನು ನೇಮಕ ಮಾಡಿ ಅಲ್ಲಿ ನಡೆಯುತ್ತಿರುವ ಸಮಗ್ರ ಅಕ್ರಮಗಳನ್ನು ಬೀದಿಗೆ ಎಳೆದರೆ ಮಾತ್ರ ಅವರ ಆತ್ಮಕ್ಕೆ ನಿಜವಾಗಿಯೂ ಕೂಡ ಶಾಂತಿ ತಂದುಕೊಟ್ಟಂತಾಗುತ್ತದೆ. ಈ ಒಂದು ಕೆಲಸವನ್ನು ತಾವು ಮಾಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ತಪ್ಪು ಮಾಡಿರತಕ್ಕಂಥದವರನ್ನು ಯಾವುದೇ ಕಾರಣಕ್ಕೂ ಬಿಡಬಾರದು. ಅವರು ಸಾಯುವುದಕ್ಕಿಂಥ ಮುಂಚೆ ಅಂದರೆ ಸುಮಾರು ಮೂರು ದಿವಸಗಳ ಹಿಂದೆ ಮಾನ್ಯ ರಮೇಶ್‌ಕುಮಾರ್ ಮತ್ತು ಮಾನ್ಯ ಜೆ.ಸಿ. ಮಾಧುಸ್ವಾಮಿಯವರ ಜೊತೆ ನಾನು ಮಾತನಾಡುತ್ತಾ ಇದರ ಬಗ್ಗೆ ಸಮಗ್ರ ಚರ್ಚೆಯಾಗಬೇಕೆಂದು ನಾನು ಹೇಳಿದೆ. ಇದರ ಬಗ್ಗೆ ನಾವು ಕೂಡ ಮಾತನಾಡುತ್ತೇವೆಂದು ಹೇಳಿದ್ದರು. ಆದರೆ, ಆ ದಿನ ಬೆಳಿಗ್ಗೆ 2 ಗಂಟೆಗೆ ನನ್ನ ಕೊಠಡಿಯಲ್ಲಿ ನಾನು ಕುಳಿತುಕೊಂಡಿದ್ದಾಗ ಮಾನ್ಯ ಸಿ. ನಾಗರಾಜ್‌ರವರು ತೀರಿಕೊಂಡರು ಎಂಬ ಸುದ್ದಿ ಬಂತು. ಮಾನ್ಯ ಪಿ.ಜಿ.ಆರ್. ಸಿಂಧ್ಯ ರವರೆ, ನಾನು ಈ ಸಂದರ್ಭದಲ್ಲಿ ಭಗವಂತನ ಮೇಲೆ ಪ್ರಮಾಣ ಮಾಡಿ ಹೇಳುವುದೇನೆಂದರೆ, ಶ್ರೀಯುತರ ಸಾವಿನಿಂದ ನನಗೆ ಬಹಳಷ್ಟು ನೋವಾಯಿತು. ಆ ದಿನ ನನ್ನ ಕೊಠಡಿಯಲ್ಲಿ 5 ನಿಮಿಷ ಲೈಟ್ ಹಾಕಿಕೊಳ್ಳದೆ ಕತ್ತಲಲ್ಲಿ ಕುಳಿತುಕೊಂಡೆ. ಬಹಳಷ್ಟು ಕೆಲಸ ಮಾಡಿದಂಥ ವ್ಯಕ್ತಿಗೆ ಕೊನೆಗಾಲದಲ್ಲಿ ಸಂತೋಷಪಡಿಸುವುದಕ್ಕೆ ನಮ್ಮ ಕೈಯಲ್ಲಿ ಆಗಲಿಲ್ಲವೆಂಬ ವ್ಯಥೆ ನನ್ನಗಾಗಿದೆ. ಆಲ್ ಇಂಡಿಯಾ ಲೆವಲ್‌ನಲ್ಲಿ ಮಾನ್ಯ ಮಾಧವರಾವ್ ಸಿಂಧ್ಯಾರವರು ಅಧ್ಯಕ್ಷರಾಗಿದ್ದಾಗ ಇವರು ಅದಕ್ಕೆ ಕಾರ್ಯದರ್ಶಿಯಾಗಿದ್ದರು. ಮಾನ್ಯ ಮಾಧವರಾವ್ ಸಿಂಧ್ಯಾರವರ ಜೊತೆ ಹಾಗೂ ಮಾನ್ಯ ಕೆಂಗಲ್ ಹನುಮಂತಯ್ಯನವರು, ಮಾನ್ಯ ಜೆ.ಎಚ್. ಪಟೇಲ್ ಹಾಗೂ ಮಾನ್ಯ ಧರ್ಮಸಿಂಗ್‌ರವರ ಸ್ನೇಹಿತರಾಗಿದ್ದರು. ಆದರೆ, ಅವತ್ತಿನದಿವಸ ಅವರು ನರಳಿ

ಸತ್ತಾಗ ನಾನು ಮಾನ್ಯ ರಮೇಶ್‌ಕುಮಾರ್ ಮತ್ತು ಮಾನ್ಯ ಡಿ.ಕೆ. ಶಿವಕುಮಾರ್‌ರವರು, ಅಂದರೆ, ನಾವು ಮೂರು ಜನ ಮಾತ್ರ ಅಲ್ಲಿದ್ದೆವು. ಆ ಸಂದರ್ಭದಲ್ಲಿ ಒಬ್ಬ ಮಂತ್ರಿಯಾಗಲಿ ಅಥವಾ ಒಬ್ಬ ಶಾಸಕರಾಗಲಿ ಅಥವಾ ಸರ್ಕಾರದ ಪರವಾಗಿ ಯಾರೂ ಇರಲಿಲ್ಲ. ಕೊನೇ ಪಕ್ಷ ಅವರಿಗೆ ಹೂವು ಹಾಕುವಂಥ ಪ್ರಯತ್ನ ಕೂಡ ಮಾಡಲಿಲ್ಲ. ಸ್ಮಶಾನದಲ್ಲಿ ಅವರ ಹೆಣ ಭೂಮಿಗೆ ಇಳಿಯುವವರೆಗೂ ನಾವು ಅಲ್ಲಿಯೇ ಕುಳಿತುಕೊಂಡು ನಮ್ಮಗಳ ಕಣ್ಣೀರನ್ನು ಒರೆಸಿಕೊಂಡು ಅಲ್ಲಿಂದ ಹೊರಕ್ಕೆ ಬಂದೆವು. ಈ ಸಂದರ್ಭದಲ್ಲಿ ಸಂತಾಪ ಸೂಚಕ ನಿರ್ಣಯವನ್ನು ಮಾಡತಕ್ಕಂಥದರ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ. ಅವರ ಹೆಣವನ್ನು ಎತ್ತಿಕೊಂಡು ಹೋಗುವಾಗ ನನಗೆ ಬಹಳಷ್ಟು ನೋವಾಯಿತು. ಏಕೆಂದರೆ, ಇಂಥ ಒಬ್ಬ ವ್ಯಕ್ತಿಗೆ ಕೊನೆಗಳಿಗೆಯಲ್ಲಿಯೂ ಕೂಡ ಅಲ್ಲಿಗೆ ಸದಸ್ಯರನ್ನಾಗಿ ಮಾಡಿ ಅಲ್ಲಿ ಕೂರಿಸುವುದಕ್ಕೆ ನಮ್ಮ ಕೈಯಲ್ಲಿ ಆಗಲಿಲ್ಲ. ಏನಾದರೂ ಮಾಡಿ ಅವರನ್ನು ಸದಸ್ಯರನ್ನಾಗಿ ಮಾಡಿ ಅಲ್ಲಿ ಕೂರಿಸಬೇಕೆಂದು ನಾನು ಮತ್ತು ಮಾನ್ಯ ರಮೇಶ್‌ಕುಮಾರ್‌ರವರು ಬಹಳ ಪ್ರಯತ್ನವನ್ನು ಮಾಡಿದ್ದೆವು. ಆದರೆ ನಮ್ಮ ಕೈಯಲ್ಲಿ ಇದನ್ನು ಮಾಡುವುದಕ್ಕೆ ಆಗಲಿಲ್ಲ. ಅತ್ಯುನ್ನತ್ತವಾಗಿ ಬೆಳೆದಂಥ ಒಬ್ಬ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೆ ಶಾಂತಿ ಕೋರಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಡಾ: ಹೆಚ್. ನರಸಿಂಹಯ್ಯನವರನ್ನು ಕಳೆದುಕೊಂಡಿರತಕ್ಕಂಥದ್ದು ನಿಜವಾಗಿಯೂ ಕೂಡ ಕರ್ನಾಟಕ ರಾಜ್ಯಕ್ಕೆ ಒಂದು ದುರಾದೃಷ್ಟಕರವಾದಂಥ ಸಂಗತಿಯಾಗಿದೆ. ಡಾ: ಹೆಚ್. ನರಸಿಂಹಯ್ಯನವರು ಒಬ್ಬ ವ್ಯಕ್ತಿಯಾಗಿರಲಿಲ್ಲ. ಅವರೊಂದು ಅಪಾರವಾದಂಥ ಜ್ಞಾನಭಂಡಾರ ಅದು ಎಂಥ ಜ್ಞಾನವೆಂದರೆ, ಅವರು ಹುಟ್ಟಿದಾಗಿನಿಂದ ಸಾಯುವವರೆಗೂ ಜನಪರವಾದಂಥ ಮತ್ತು ಸಮಾಜದಲ್ಲಿ ತುಳಿತಕ್ಕೆ, ಶೋಷಣೆಗೆ ಒಳಗಾದಂಥ ಜನರ ಪರವಾದಂಥ ಒಂದು ಜ್ಞಾನಭಂಡಾರವನ್ನು ನರಸಿಂಹಯ್ಯನವರು ಹೊಂದಿದ್ದರು. ಹಾಗೆಯೇ ಇದರ ಜೊತೆಗೆ ಸಮಾಜದಲ್ಲಿದ್ದಂಥ ಒಂದು ಮೂಢನಂಬಿಕೆಗಳ ವಿರುದ್ಧ ಕರ್ನಾಟಕದಂಥ ರಾಜ್ಯದಲ್ಲಿ ಒಂದು ದೊಡ್ಡ ಹೋರಾಟವನ್ನು ನಡೆಸಿದಂಥ ವ್ಯಕ್ತಿ ಆಗಿದ್ದರು. ಮತ್ತೆ ಸಾಯಿಬಾಬರವರ ಹೆಸರು ಹೇಳಿದರೆ ಅವರು ಒಂದು ರೀತಿಯಲ್ಲಿ ಭಾವುಕರಾಗುತ್ತಿದ್ದರು. ಮತ್ತೆ ಮೌಢ್ಯದ ವಿರುದ್ಧ ಹೋರಾಟವನ್ನೂ ಕೂಡ ಮಾಡಿದ್ದರು. ಆವತ್ತಿನ ಪರಿಸ್ಥಿತಿಯಲ್ಲಿ ಈ ರೀತಿ ಮಾಡತಕ್ಕಂಥದ್ದು ಅಷ್ಟೊಂದು ಸುಲಭದ ಕೆಲಸವಾಗಿರಲಿಲ್ಲ. ಆದರೆ, ಇವರು ಮಾತ್ರ ಎಂದಿಗೂ ಕೂಡ ಎದೆಗುಂದಿರಲಿಲ್ಲ. ಅಥವಾ ಯಾರನ್ನೂ ಗುಂಪುಕಟ್ಟಿಕೊಂಡು ವ್ಯವಹಾರ ಮಾಡಿದಂಥ ವ್ಯಕ್ತಿಯಲ್ಲ. ಆ ರೀತಿಯಲ್ಲಿ ವೈಚಾರಿಕತೆಗೆ ನರಸಿಂಹಯ್ಯನವರು ನರಸಿಂಹಯ್ಯನವರಿಗೆ ಸಾಟಿಯಾಗಿದ್ದರು. ಬೇರೆ ಯಾರೂ ಕೂಡ ಇದಕ್ಕೆ ಸಾಟಿಯಾಗುವುದಕ್ಕೆ ಸಾಧ್ಯವಿಲ್ಲ. ಮತ್ತೆ ಅವರೇನು ನಂಬಿದ್ದರು ಅದರ ಪ್ರಕಾರ

ಬದುಕುವಂಥ ವ್ಯಕ್ತಿಯಾಗಿದ್ದರು. ಮತ್ತೆ ಅಷ್ಟು ಸರಳವಾದಂಥ ಜೀವನ ನಡೆಸಿದಂಥ ವ್ಯಕ್ತಿ. ಈ ರೀತಿಯಾದ ವ್ಯಕ್ತಿಯನ್ನು ಇನ್ನು ಮುಂದೆ ನೋಡುವುದಿಲ್ಲ ಮತ್ತೆ ಈ ಹಿಂದೆ ಕೂಡ ನೋಡಲಿಕ್ಕೆ ಸಾಧ್ಯವಿಲ್ಲ. ನಾನು ವಿದ್ಯಾರ್ಥಿ ಆದಾಗಿನಿಂದಲೂ ಅಂದರೆ ಸುಮಾರು 20 ರಿಂದ 25 ವರ್ಷಗಳಿಂದ ಅವರ ಜೊತೆಯಲ್ಲಿ ನಾನು ಸಂಪರ್ಕ ಇಟ್ಟುಕೊಂಡಿದ್ದೆ. ಶ್ರೀಯುತರು ಚಾಪೆಯ ಮೇಲೆ ಮಲಗುತ್ತಿದ್ದರು. ಆದರೆ, 2–3 ವರ್ಷಗಳ ಹಿಂದೆ ಡಾಕ್ಟರ್‌ರವರು ಭಾರಿ ಗಂಭೀರವಾಗಿ ಅವರಿಗೆ ಎಚ್ಚರಿಕೆ ಕೊಟ್ಟ ಮೇಲೆ ಇವರು ಬೆಡ್ ಮೇಲೆ ಮಲಗಿಕೊಳ್ಳುವುದಕ್ಕೆ ಪ್ರಾರಂಭ ಮಾಡಿದರು. ಅದಕ್ಕೂ ಮೊದಲು ಅವರು ಒಂದು ಚಾಪೆ ಮತ್ತು ದಿಂಬಿನ ಮೇಲೆ ಮಲಗಿಕೊಳ್ಳುತ್ತಿದ್ದರು. ಅವರ ರೂಮ್‌ಗೆ ಯಾರು ಹೋದರೂ ಕೂಡ ಚಾಪೆಯ ಮೇಲೆ ಕುಳಿತುಕೊಳ್ಳಬೇಕಾಗಿತ್ತು. ಏಕೆಂದರೆ, ಅವರ ರೂಮ್‌ನಲ್ಲಿ ಒಂದು ಚೇರ್ ಕೂಡ ಹಾಕಿರಲಿಲ್ಲ. ಈ ರೀತಿಯಾದ ಸರಳ ಜೀವನ ನಡೆಸುವುದಕ್ಕೆ ಖಂಡಿತವಾಗಿ ಯಾರಿಗೂ ಸಾಧ್ಯವಾಗುವುದಿಲ್ಲ. ಆ ರೀತಿ ಈ ರೀತಿ ನಡೆದುಕೊಳ್ಳುತ್ತೇವೆಂದು ಬಾಯಿಯಲ್ಲಿ ಹೇಳಬಹುದು. ಆದರೆ, ಈ ರೀತಿಯಾಗಿ ನಡೆದುಕೊಂಡಂಥ ಒಬ್ಬ ಗೌರವಾನ್ವಿತ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಶ್ರೀಯುತರು ವೈಸ್ ಚಾನ್ಸಲರ್ ಆಗಿದ್ದರು. ಇವರು ಮನಸ್ಸು ಮಾಡಿದ್ದರೆ ಏನು ಬೇಕಾದರೂ ಮಾಡಬಹುದಾಗಿತ್ತು. ಆದರೆ, ಅಂಥ ಒಬ್ಬ ಮನುಷ್ಯ ಚಾಪೆಯ ಮೇಲೆ ಮಲಗಿಕೊಳ್ಳುತ್ತಿದ್ದರು. ಇದನ್ನು ಯಾರೂ ಕೂಡ ಊಹೆ ಮಾಡುವುದಕ್ಕೆ ಸಾಧ್ಯವಿಲ್ಲ. ಮತ್ತೆ ಇದರ ಜೊತೆಗೆ ಅವರು ಶಿಕ್ಷಣದ ಬಗ್ಗೆ ನಿರಂತರವಾದ ಕಾಳಜಿಯನ್ನು ಇಟ್ಟುಕೊಂಡಿದ್ದರು. ನಮ್ಮ ಜೊತೆ ಮಾತನಾಡುವಂಥ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದ್ದರು. ಅದೇನೆಂದರೆ, ಶಿಕ್ಷಣ ಎನ್ನತಕ್ಕಂಥದ್ದು ನಮ್ಮ ದೇಶದ ಮೆದುಳು ಇದ್ದ ಹಾಗೆ. ಈ ಮೆದುಳು ಆರೋಗ್ಯಕರವಾಗಿ ಕೆಲಸ ಮಾಡಿದರೆ ಮಾತ್ರ ನಮ್ಮ ದೇಶ ಸಾಮಾಜಿಕವಾಗಿ ಆರೋಗ್ಯಕರವಾಗಿರುವುದಕ್ಕೆ ಸಾಧ್ಯವಾಗುತ್ತದೆ. ಈ ಶಿಕ್ಷಣವೇನಾದರೂ ಅನಾರೋಗ್ಯವಾದರೆ ಇಡೀ ಸಮಾಜ ಮತ್ತು ದೇಶ ಅನಾರೋಗ್ಯಕರಕ್ಕೆ ಗುರಿಯಾಗುತ್ತದೆ ಎಂದು ಹೇಳಿದ್ದರು. ಈ ಒಂದು ಉದ್ದೇಶಕ್ಕೋಸ್ಕರವೇ ಅವರ ಜೀವನದ ಉದ್ದಕ್ಕೂ ಶಿಕ್ಷಣದಲ್ಲಿ ಬದಲಾವಣೆ ತರಬೇಕೆಂದು ಹೋರಾಟ ನಡೆಸಿದ್ದರು. ಮತ್ತೆ ಈ ಶಿಕ್ಷಣ ಪ್ರತಿಯೊಬ್ಬರಿಗೂ ಸಿಗಬೇಕೆಂದು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿರುವುದರ ಜೊತೆಗೆ ಈ ಶಿಕ್ಷಣ ಸಮಾಜದ ಕಟ್ಟಕಡೆಯ ಮನುಷ್ಯನವರೆಗೂ ಸಿಗಬೇಕೆಂದು ಪ್ರಾಮಾಣಿಕ ಪ್ರಯತ್ನ ಕೂಡ ಮಾಡಿದ್ದರು. ಶ್ರೀಯುತರು ನನ್ನ ಸ್ವಂತ ಜಿಲ್ಲೆಯವರಾಗಿದ್ದರು. ಅವರ ವೈಯಕ್ತಿಕ ಜೀವನ ಎಷ್ಟು ದುರಂತ ಅಂತ ಹೇಳಿದರೆ, ಅವರ ತಂದೆ ಯಾರೆಂಬುದೇ ಅವರಿಗೆ ಗೊತ್ತಿಲ್ಲ. ಅವರಿಗೆ ಅವರ ತಾಯಿ ಮಾತ್ರ ಗೊತ್ತಿತ್ತು. ಅವರ ತಾಯಿ ಕೂಲಿ ಕೆಲಸ ಮಾಡುತ್ತಿದ್ದರು. ಮತ್ತೆ ಅವರ ತಾಯಿಗೆ ಒಂದು ಮನೆ ಕೂಡ ಇರಲಿಲ್ಲ. ಇವರು ಪ್ರೊಫೆಸರ್ ಆದ ಮೇಲೆ ಒಂದು ಸಣ್ಣ ಮನೆ ಮಾಡಿಕೊಂಡಿದ್ದರು.

ಈ ರೀತಿಯಾದಂಥ ಒಂದು ದುರಂತಮಯವಾದ ವೈಯಕ್ತಿಕ ಜೀವನ ಅವರದ್ದಾಗಿತ್ತು. ಮತ್ತೆ ಇವರು ವ್ಯಕ್ತಿಗತವಾಗಿ, ಸ್ವಂತಕ್ಕಾಗಿ ಎಂದೂ ಏನನ್ನೂ ಕೂಡ ಬಯಸಿದಂಥ ವ್ಯಕ್ತಿಯಾಗಿರಲಿಲ್ಲ. ಅವರ ಊರಾದ ಹೊಸೂರಿಗೆ ನನ್ನ ಬಾಡಿಯನ್ನು ತೆಗೆದುಕೊಂಡು ಹೋಗಬೇಕೆಂಬುದು ಅವರು ಸಾಯುವಾಗ ಅವರ ಕೊನೆಯ ಆಸೆಯಾಗಿತ್ತು. ಅವರ ಹುಟ್ಟಿದ ಊರಿನಲ್ಲಿ ಯಾರ ಸಹಾಯ ತೆಗೆದುಕೊಳ್ಳದೆ ಅವರ ಸ್ವಂತ ಶ್ರಮದಿಂದ ಹೈಸ್ಕೂಲ್, ಜ್ಯೂನಿಯರ್ ಕಾಲೇಜು, ಹಾಸ್ಟೆಲ್, ಕಂಪ್ಯೂಟರ್ ಸೆಕ್ಷನ್ ಮತ್ತು ವಿಜ್ಞಾನ ಕೇಂದ್ರವನ್ನು ಪ್ರಾರಂಭ ಮಾಡಿದ್ದಾರೆ. ಇದಕ್ಕೆ ಯಾರ ಸಹಾಯವನ್ನೂ ಅವರು ಪಡೆದುಕೊಂಡಿರಲಿಲ್ಲ. ಅವರ ಸ್ನೇಹಿತರೂ ಅವರ ವೆಲ್ ವಿಷರ್ಸ್‌ಗಳಿಂದ ಅವೆಲ್ಲವನ್ನೂ ಅವರು ಮಾಡಿದ್ದಾರೆ. ನಾನು ಸತ್ತ ನಂತರ ಇಲ್ಲಿಯೇ ಮಣ್ಣು ಮಾಡಬೇಕೆಂದು ಅವರು ಮೊದಲೇ ಜಾಗ ತೆಗೆದುಕೊಂಡಿದ್ದರು. ಈ ಜಾಗವನ್ನು ಅವರು ಯಾರ ಹತ್ತಿರವೂ ಉಚಿತವಾಗಿ ಪಡೆದುಕೊಳ್ಳಲಿಲ್ಲ. ಇದಕ್ಕೆ ಹಣ ಕೊಟ್ಟು ಪಡೆದುಕೊಂಡಿದ್ದರು. ಮತ್ತೆ ವಿಜ್ಞಾನ ಕ್ಷೇತ್ರಕ್ಕೆ ಅವರ ಕೊಡುಗೆ ಅಪಾರವಾದಂಥದ್ದು. ಶ್ರೀಯುತರು ಮೂಲತ: ಭೌತಶಾಸ್ತ್ರದ ವಿಜ್ಞಾನಿಯಾಗಿದ್ದರು. ಆದರೆ, ಅವರನ್ನು ಮೇಲ್ನೋಟಕ್ಕೆ ಭೌತಶಾಸ್ತ್ರದ ವಿಜ್ಞಾನಿ ಎಂದು ಅಂದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಒಬ್ಬ ಗಾಂಧಿವಾದಿ ಅಥವಾ ಯಾರೊ ಒಬ್ಬ ಸಮಾಜ ಸೇವಕ ಅನ್ನುವ ರೀತಿಯಲ್ಲಿ ಕಾಣುತ್ತಿದ್ದರು. ಆದರೆ, ಶ್ರೀಯುತರು ಭೌತಶಾಸ್ತ್ರದ ವಿಜ್ಞಾನದ ಬಗ್ಗೆ ಅತ್ಯುನ್ನತವಾದ ಪಾಂಡಿತ್ಯವನ್ನು ಹೊಂದಿದ್ದಂಥವರು, ನಾನು ಒಂದು ಸಲ ಅವರ ರೂಮ್‌ಗೆ ಅಕಸ್ಮಾತ್ ಹೋದಾಗ ಅಲ್ಲಿ ಮಾನ್ಯ ರಾಜಣ್ಣನವರೂ ಕೂಡ ಅಲ್ಲಿಗೆ ಬಂದು ಅವರ ಜೊತೆಯಲ್ಲಿ ಚರ್ಚೆ ಮಾಡುತ್ತಾ ಇದ್ದರು. ಇವರಿಬ್ಬರೂ ಅಲ್ಲಿ ಚಾಪೆಯ ಮೇಲೆ ಕುಳಿತುಕೊಂಡು ಯಾವ ವಿಚಾರದ ಮೇಲೆ ಮಾತನಾಡುತ್ತಿದ್ದರೆಂದರೆ, ಅಣು ವಿಕೇಂದ್ರೀಕರಣದ ಬಗ್ಗೆ ಏನೊಂದು ಸಮಸ್ಯೆ ಇತ್ತು, ಮೇಸ್ಟ್ರೇ, ಅದಕ್ಕೋಸ್ಕರ ತಮ್ಮ ಜೊತೆಯಲ್ಲಿ ಮಾತನಾಡುವುದಕ್ಕೆ ಬಂದಿದ್ದೇನೆಂದು ಹೇಳುತ್ತಾ ಅವರ ಜೊತೆಯಲ್ಲಿ ಮಾತನಾಡುತ್ತಿದ್ದರು. ಆ ರೀತಿಯಾದ ಜ್ಞಾನವನ್ನು ಹೊಂದಿದಂಥ ಒಬ್ಬ ಅಣು ವಿಜ್ಞಾನಿ ಮತ್ತು ವಿಚಾರವಾದಿ ಹಾಗೂ ಮೌಢ್ಯತೆ ವಿರುದ್ಧ ನಿರಂತರವಾಗಿ ಹೋರಾಟ ಮಾಡಿಕೊಂಡು ಬಂದಂಥ ವ್ಯಕ್ತಿ ನಮ್ಮೆಲ್ಲರನ್ನೂ ಬಿಟ್ಟು ಅಗಲಿದ್ದಾರೆ. ಆದ್ದರಿಂದ ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ದಯವಿಟ್ಟು ಡಾ: ಹೆಚ್. ನರಸಿಂಹಯ್ಯನವರ ಸ್ಮಾರಕ ಮಾಡಬೇಕು ಮತ್ತೆ ಅವರ ಹೆಸರಿನಲ್ಲಿ ಒಂದು ಅಧ್ಯಯನ ಕೇಂದ್ರವನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ವೈಜ್ಞಾನಿಕ ಮತ್ತು ವೈಚಾರಿಕತೆ ವಿಚಾರಗಳನ್ನು ಸಂಶೋಧನೆ ಮಾಡತಕ್ಕಂಥ ಒಂದು ಸಂಶೋಧನಾ ಅಧ್ಯಯನ ಕೇಂದ್ರವನ್ನು ಕರ್ನಾಟಕ ರಾಜ್ಯ ಸರ್ಕಾರ ಅವರ ಹೆಸರಿನಲ್ಲಿ ತಕ್ಷಣವೇ ಸ್ಥಾಪನೆ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳಬೇಕು. ಅವರಿಗೆ ಸ್ಮಾರಕಗಳ ಮೇಲೆ ನಂಬಿಕೆ ಇರಲಿಲ್ಲ. ಅಧ್ಯಯನ

ಮಾಡುವುದರ ಬಗ್ಗೆ ಅವರಿಗೆ ಬಹಳ ಆಸಕ್ತಿ ಇತ್ತು. ಮಾನ್ಯ ಪಿ.ಜಿ.ಆರ್. ಸಿಂಧ್ಯರವರೂ ಕೂಡ ಅವರ ಸ್ಟೂಡೆಂಟ್ ಆಗಿದ್ದರು. ಮತ್ತೆ ಅವರ ಹತ್ತಿರ ಪಾಠ ಹೇಳಿಸಿಕೊಂಡಿರತಕ್ಕಂಥ ಅನೇಕ ಜನರು ಇವತ್ತಿನ ದಿವಸ ಇಲ್ಲಿದ್ದಾರೆ. ನಮ್ಮೆಲ್ಲರ ಕಳಕಳಿಯ ಒತ್ತಾಯವೇನೆಂದರೆ, ಸರ್ಕಾರ ಅವರ ಹೆಸರಿನಲ್ಲಿ ಒಂದು ಅಧ್ಯಯನ ಕೇಂದ್ರವನ್ನು ಸ್ಥಾಪನೆ ಮಾಡಿ, ಅದೊಂದು ಸ್ವಾಯತ್ತ ಸಂಸ್ಥೆಯನ್ನಾಗಿ ಮಾಡಿ ಯಾರ ಹಸ್ತಕ್ಷೇಪವಿಲ್ಲದಂತೆ ಒಂದು ಅಧ್ಯಯನ ಕೇಂದ್ರವನ್ನು ಡಾ: ಹೆಚ್. ನರಸಿಂಹಯ್ಯನವರ ಹೆಸರಿನಲ್ಲಿ ಮಾಡಬೇಕೆಂದು ಹೇಳಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಅವರು ಶಿಕ್ಷಣದ ಬಗ್ಗೆ ಇಟ್ಟಿದ್ದಂಥ ಒಂದು ಅಪಾರವಾದ ಅಭಿಮಾನಕ್ಕೋಸ್ಕರ ಯಾವುದಾದರೊಂದು ವಿಶ್ವವಿದ್ಯಾನಿಲಯಕ್ಕೆ ಅವರ ಹೆಸರನ್ನು ಕರ್ನಾಟಕ ರಾಜ್ಯದಲ್ಲಿಟ್ಟರೆ ಅದು ಬಹುಶ: ಒಳ್ಳೆಯದಾಗುತ್ತದೆಂಬುದು ನನ್ನ ಅಭಿಪ್ರಾಯವಿದೆ. ಅದಕ್ಕಾಗಿ ಯಾವುದಾದರೊಂದು ವಿಶ್ವವಿದ್ಯಾನಿಲಯಕ್ಕೆ ಅವರ ಹೆಸರನ್ನು ಇಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತಿದ್ದೇನೆ. ಹೊಸೂರಿನಲ್ಲಿ ಒಂದು ನ್ಯಾಷನಲ್ ಕಾಲೇಜನ್ನು ಪ್ರಾರಂಭ ಮಾಡಿದ್ದಾರೆ ಅದಕ್ಕೆ ಏನು ವ್ಯವಸ್ಥೆ ಇದೆ ಎನ್ನತಕ್ಕಂಥದ್ದು ನನಗೆ ಗೊತ್ತಿಲ್ಲ. ಅವರ ನಂತರ ಅದನ್ನು ಯಾರು ನೋಡಿಕೊಳ್ಳುತ್ತಾರೆ, ಎಂಬುದು ಗೊತ್ತಿಲ್ಲ. ಅದನ್ನು ಸರ್ಕಾರ ಪರಿಶೀಲನೆ ಮಾಡಿ ಅದನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಲಿಕ್ಕೆ ಬೇಕಾದ ಒಂದು ವ್ಯವಸ್ಥೆಯನ್ನು ದಯವಿಟ್ಟು ಮಾಡಬೇಕು. ಅವರು ಹುಟ್ಟಿದ ಊರು ಹೊಸೂರು ಗ್ರಾಮವನ್ನು ಸರ್ಕಾರ ದತ್ತು ಗ್ರಾಮವನ್ನಾಗಿ ಮಾಡಿಕೊಂಡು ಆ ಗ್ರಾಮವನ್ನು ಅವರ ವಿಚಾರಧಾರೆಗೆ ಹೊಂದತಕ್ಕಂತ ರೀತಿಯಲ್ಲಿ ಅಭಿವೃದ್ಧಿ ಮಾಡಬೇಕೆಂದು ಹೇಳುತ್ತಾ, ನಾನು ಈ ಮೂರು ವಿಚಾರಗಳನ್ನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಇನ್ನು ಸಿ. ನಾಗರಾಜ್‌ರವರ ಸಾಕಷ್ಟು ವಿಚಾರಗಳನ್ನು ಶ್ರೀ ಮಾಧುಸ್ವಾಮಿ ಮತ್ತು ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿದ್ದಾರೆ. ನಾಗರಾಜುರವರ ನೋವು ವಾಟಾಳ್ ನಾಗರಾಜ್‌ರವರು ಹೇಳಿದಂತೆ ನಾನೂ ಕೂಡ ಕಂಡಿದ್ದೇನೆ. ಈ ದೇಶದ ರಾಜ್ಯದ ಕ್ರೀಡಾ ಸಂಸ್ಥೆಯನ್ನು ಬೆಳಸಲಿಕ್ಕೆ ಅವರು ಪಟ್ಟಂಥ ಶ್ರಮ ಬಹಳ ಕಷ್ಟ. ಅಲ್ಲಿ ಇವತ್ತು ಯಾರ್‍ಯಾರೋ ಸೇರಿಕೊಂಡು ಅವರಿಗೆ ನೋವನ್ನುಂಟು ಮಾಡಿ ಅವರಿಗೆ ಮಾನಸಿಕವಾಗಿ ಒಂದು ರೀತಿಯಲ್ಲಿ ಹಿಂಸೆಯನ್ನು ಮಾಡಿದ್ದಾರೆ. ಆ ಹಿಂಸೆಯಿಂದಲೇ ಅವರು ಬಹುಶ: ತೀರಿಕೊಂಡರು. ಇಲ್ಲದಿದ್ದರೆ ಇನ್ನೊಂದಿಷ್ಟು ದಿವಸ ಬದುಕುತ್ತಿದ್ದರು. ಹಾಗಾಗಿ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಇದರ ಬಗ್ಗೆ ತನಿಖೆಯನ್ನು ನಡೆಸಬೇಕೆಂದು ಹೇಳಿ ಒತ್ತಾಯವನ್ನು ಮಾಡುತ್ತಾ, ನನ್ನ ಮಾತನ್ನು ಮುಗಿಸುತ್ತಿದ್ದೇನೆ.

†ಶ್ರೀ ಪಿ.ಜಿ.ಆರ್. ಸಿಂಧ್ಯಾ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಡಾ: ಹೆಚ್.ಎನ್. ರವರ ನಿಧನ ನಮ್ಮ ರಾಜ್ಯಕ್ಕೆ ಅಷ್ಟೇ ಅಲ್ಲ ರಾಷ್ಟ್ರಕ್ಕೆ ಆಗಿರತಕ್ಕಂಥ ಒಂದು ದೊಡ್ಡ ನಷ್ಟವೆಂದು ಹೇಳಿ ನಾನು ಭಾವಿಸಿಕೊಂಡಿರುತ್ತೇನೆ. 1965–66ನೇ ಸಾಲಿನಲ್ಲಿ ನಾನು ಕನ್ನಡ ಮೀಡಿಯಂನಲ್ಲಿ ಎಸ್‌ಎಸ್‌ಎಲ್‌ಸಿ ಯನ್ನು ಓದಿ ನಮ್ಮ ತಾಲ್ಲೂಕಿನ ಹಿರಿಯ ನಾಯಕರು ಸ್ವಾತಂತ್ರ್ಯ ಹೋರಾಟಗಾರರು ಆಗಿದ್ದಂಥ ಕರಿಯಪ್ಪನವರು ನನ್ನನ್ನು ಕರೆದುಕೊಂಡು ಬಂದು ಬೆಂಗಳೂರಿನಲ್ಲಿ ನನಗೆ ಪ್ರಿ–ಯುನಿವರ್ಸಿಟಿಗೆ ಸೇರಿಸಬೇಕು ಎಂದು ಹೇಳಿದಾಗ ಡಾ: ಹೆಚ್. ನರಸಿಂಹಯ್ಯನವರ ಕಾಲೇಜಿನಲ್ಲಿ ನನಗೆ ಸೀಟು ಸಿಕ್ಕಿತು. ಆದರೆ ನನಗೆ ಹಾಸ್ಟೆಲ್ ಸೀಟು ಸಿಗಲಿಲ್ಲ. ಆ ಸಂದರ್ಭದಲ್ಲಿ ಡಾ: ಹೆಚ್. ನರಸಿಂಹಯ್ಯನವರು ಅವರ ಕೊಠಡಿಯಲ್ಲಿಯೇ ನನ್ನನ್ನು ಇರಿಸಿಕೊಂಡರು. ಆ ಕೊಠಡಿ ಸಂಖ್ಯೆ: 13, ಅದು ನನಗೆ ಬಹಳ ಚೆನ್ನಾಗಿ ನೆನಪಿದೆ. 37–38 ವರ್ಷಗಳಿಂದ ಹೆಚ್.ಎನ್. ರವರ ವಿದ್ಯಾರ್ಥಿಯಾಗಿ ನಾನು ಅವರಲ್ಲಿ ಪರಿಣತಿಯನ್ನು ಪಡೆದಿದ್ದೆ. ಅವರು ನನ್ನ ಬಗ್ಗೆ ಅಪಾರವಾದ ಅಭಿಮಾನವನ್ನು ಇಟ್ಟುಕೊಂಡಿದ್ದರು. ನಮ್ಮ ತಂದೆ–ತಾಯಿಗಳು ತಮ್ಮ ಮಕ್ಕಳ ಬಗ್ಗೆ ಎಷ್ಟೊಂದು ಪ್ರೀತಿ ವಿಶ್ವಾಸವನ್ನು ತೋರಿಸುತ್ತಾರೊ ಅಷ್ಟೇ ವಿಶ್ವಾಸವನ್ನು ಅವರ ವಿದ್ಯಾರ್ಥಿಗಳಿಗೆ ಅವರು ತೋರಿಸುತ್ತಿದ್ದರು. ಅವರ ಅನೇಕ ವಿದ್ಯಾರ್ಥಿಗಳು ಇವತ್ತು ಮೇಲ್ಮನೆ ಮತ್ತು ಕೆಳಮನೆ ಸದಸ್ಯರುಗಳು ಆಗಿದ್ದಾರೆ. ಶ್ರೀ ಡಿ.ಟಿ. ಜಯಕುಮಾರ್ ಮತ್ತು ಸಭಾಪತಿಗಳಾದ ಶ್ರೀ ಸುದರ್ಶನ್‌ರವರು ಅವರ ವಿದ್ಯಾರ್ಥಿಗಳು ಆಗಿದ್ದವರು. ಪ್ರಪಂಚದ ಅನೇಕ ದೊಡ್ಡ ದೊಡ್ಡ ವಿಜ್ಞಾನಿಗಳು ಕ್ರೀಡಾಪಟುಗಳು ಇವರನ್ನೆಲ್ಲಾ ಕೊಟ್ಟಂಥ ಕೀರ್ತಿ ನಮ್ಮ ನ್ಯಾಷನಲ್ ಎಜ್ಯುಕೇಶನ್ ಸೊಸೈಟಿಗೆ ಸೇರತಕ್ಕಂಥದ್ದು. ಅದರ ಅಧ್ಯಕ್ಷರಾಗಿ ಡಾ: ಹೆಚ್.ಎನ್. ರವರು ಮಾಡಿರತಕ್ಕಂಥ ಸೇವೆ ಅತ್ಯಂಥ ಅಮೂಲ್ಯವಾದಂಥದ್ದು ಎಂದು ನಾನು ತಿಳಿದಿದ್ದೇನೆ. ಇವತ್ತು ಬೆಂಗಳೂರು ನಗರ ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರಪಂಚದಲ್ಲಿಯೇ ಒಂದು ದೊಡ್ಡ ಜ್ಞಾನದ ಒಂದು ಕೇಂದ್ರವಾಗಿ ಬೆಳೆದಿರಬೇಕಾದರೆ 4–5 ಜನರು ಮಾಡಿರತಕ್ಕಂಥ ಕೊಡುಗೆಯನ್ನು ನಾವು ಮರೆಯುವುದಕ್ಕೆ ಸಾಧ್ಯವಿಲ್ಲ. ಅದರಲ್ಲಿ ಎಪಿಎಸ್ ಕಾಲೇಜಿನ ಶ್ರೀ ಕೆ. ಸಂಪತ್‌ಗಿರಿ ರಾಯರು, ಎಂಇಎಸ್ ಕಾಲೇಜಿನ ಮಾನ್ಯ ಎಂ.ಪಿ.ಎಲ್. ಶಾಸ್ತ್ರಿಯವರು ಸೇಂಟ್ ಜೊಸೆಫ್ ಸಂಸ್ಥೆಯವರು ಮತ್ತು ಡಾ: ಹೆಚ್. ನರಸಿಂಹಯ್ಯನವರು. ಈ ಎಲ್ಲಾ ಸಂಸ್ಥೆಗಳನ್ನು ಪ್ರಾರಂಭ ಮಾಡಿದವರು ಡಾ: ಹೆಚ್. ನರಸಿಂಹಯ್ಯನವರು ಅವರ ಜೊತೆಯಲ್ಲಿ ನಾನು ಸುಮಾರು 13 ತಿಂಗಳುಗಳ ಕಾಲ ಹಾಸ್ಟೆಲ್‌ದಲ್ಲಿದ್ದಾಗ, ಅವರು ದೇವರಲ್ಲಿ ಅಪಾರವಾದ

† ಈ ಭಾಷಣವನ್ನು ಮಾನ್ಯ ಸಚಿವರಿಂದ ಪರಿಷ್ಕರಿಸಲ್ಪಟ್ಟಿದೆ.

ನಂಬಿಕೆಯನ್ನು ಇಟ್ಟುಕೊಂಡಿದ್ದವರು, ಅವರಿಗೆ ದೇವರಲ್ಲಿ ನಂಬಿಕೆ ಇರಲಿಲ್ಲವೆಂದು ಏನೂ ಇಲ್ಲ. ಆದರೆ ಮೌಢ್ಯ ನಂಬಿಕೆಗಳಲ್ಲಿ ಅವರಿಗೆ ನಂಬಿಕೆ ಇರಲಿಲ್ಲ. ರಾಮಕೃಷ್ಣ ಪರಮಹಂಸರು, ಶಾರದಾದೇವಿ, ಸ್ವಾಮಿ ವಿವೇಕಾನಂದರು ಎಂದು ಹೇಳಿದರೆ ಅವರ ಬಗ್ಗೆ ಅಪಾರವಾದ ಒಂದು ಗೌರವವನ್ನು ಇಟ್ಟುಕೊಂಡಿದ್ದರು. ನಾನು ಪಿಯುಸಿಯನ್ನು ಪಾಸು ಮಾಡಿಕೊಂಡು ಇಂಜಿನಿಯರಿಂಗ್ ಸೇರಿಕೊಂಡಾಗ ಅವರು ನನಗೆ ಕೊಟ್ಟಿರುವ ಒಂದು ಸ್ವಾಮಿ ವಿವೇಕಾನಂದ, ರಾಮಕೃಷ್ಣ ಪರಮಹಂಸರು, ಶಾರದಾದೇವಿಯವರ ಒಂದು ಫೋಟೋವನ್ನು ಅವರ ಜ್ಞಾಪಕಾರ್ಥವಾಗಿ ಇವತ್ತಿಗೂ ಕೂಡ ಉಳಿಸಿಕೊಂಡಿರುತ್ತೇನೆ. ಅವರು ಬಹಳ ಹೆಚ್ಚಾಗಿ ತಮ್ಮ ಜೀವನದಲ್ಲಿ ಕೆಲವು ಮೌಲ್ಯಗಳನ್ನು ನಂಬಿಕೊಂಡಿದ್ದರು. ಹಿಂದುಳಿದ ವರ್ಗಗಳ ಬಗ್ಗೆ ಮತ್ತು ಜಾತ್ಯಾತೀತವಾದದ ಬಗ್ಗೆ ಅವರಿಗೆ ಇದ್ದಂಥ ಅಪಾರವಾದಂಥ ಶ್ರದ್ಧೆ, ಅವರನ್ನು ಇವತ್ತು ದೇಶದ ಒಬ್ಬ ಬಹುದೊಡ್ಡ ನಾಯಕರನ್ನಾಗಿ ನಾವು ಅವರನ್ನು ನೋಡಬಹುದು. ಅಂತಹ ಒಬ್ಬ ವ್ಯಕ್ತಿ ಇವತ್ತು ಮತ್ತೊಬ್ಬರು ದೇಶದಲ್ಲಿ ಸಿಗುವುದಿಲ್ಲವೆಂದು ಹೇಳಿದರೂ ಸಹಿತ ಅತಿಶಯೋಕ್ತಿ ಯಾಗುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಶ್ರೀರಾಮರೆಡ್ಡಿಯವರು ಅನೇಕ ಸಲಹೆಗಳನ್ನು ಡಾ: ಹೆಚ್.ಎನ್. ರವರ ಜ್ಞಾಪಕಾರ್ಥವಾಗಿ ಮಾಡಬೇಕು, ವಿಶ್ವವಿದ್ಯಾನಿಲಯಕ್ಕೆ ಅವರ ಹೆಸರನ್ನು ಇಡತಕ್ಕಂಥ ವಿಚಾರ ಅವರಿಗೆ ಬಹಳ ನಂಬಿಕೆ ಇದ್ದಂಥದ್ದು ಶಿಕ್ಷಣ ಕ್ಷೇತ್ರದಲ್ಲಿ, ಶಿಕ್ಷಣ ಎನ್ನತಕ್ಕಂಥದ್ದು ದೇಶದ ಬೆಳವಣಿಗೆಗೆ ನಿಜವಾಗಿಯೂ ಬೇಕಾಗಿರತಕ್ಕಂಥ ಮೆದುಳು. ಅದು ಸರಿಹೋಗಬೇಕೆನ್ನುವ ವಿಚಾರದ ಬಗ್ಗೆ ಅವರು ಪದೇ ಪದೇ ಹೇಳುತ್ತಿದ್ದರು. ಅವರ ಬಾಯಿಯಲ್ಲಿಯೇ ಬರುತ್ತಿದೆಯೇನೋ ಎನ್ನುವ ರೀತಿಯಲ್ಲಿ ಶ್ರೀರಾಮರೆಡ್ಡಿಯವರು ಮಾತನಾಡಿದಾಗ ನನಗಾದರೂ ಅನಿಸುತ್ತಿದೆ. ಅವರು ಒಬ್ಬ ಆದರ್ಶ ಉಪಕುಲಪತಿಗಳಾಗಿ ಮತ್ತು ಆದರ್ಶ ಒಬ್ಬ ವಿಧಾನಪರಿಷತ್ ಸದಸ್ಯರಾಗಿದ್ದರು. ಅವರು ಒಬ್ಬ ಭೌತವಿಜ್ಞಾನಿಯಾಗಿ ಅವರು ನಿಜಜೀವನದಲ್ಲಿ ಒಬ್ಬ ವಿಜ್ಞಾನಿ ಯಾವ ರೀತಿಯಾಗಿ ನಡೆದುಕೊಳ್ಳುತ್ತಾನೊ ಹಾಗೆ ನಡೆದುಕೊಳ್ಳುತ್ತಿದ್ದರು. ಅವರನ್ನು ಯಾರೇ ರಾಜಕಾರಣಿಗಳು ಭೇಟಿ ಮಾಡಿದರೂ ಕೂಡ ಅವರಿಗೆ ಯಾರು ಸಜ್ಜನರು ಅನ್ನಿಸುತ್ತಿತ್ತು ಅವರೆಲ್ಲರಿಗೂ ಅವರು ಕೇಳುತ್ತಿದ್ದರು ನಿಮ್ಮ ಆರೋಗ್ಯ ಹೇಗೆ ಇದೆ, ವಾಕಿಂಗ್ ಮಾಡುತ್ತೀರಾ? ಟೆನಿಸ್ ಆಡುತ್ತೀರಾ ಎಂದು ಪ್ರತಿಸಲ ಅವರು ಕೇಳುತ್ತಿದ್ದರು. ಇವತ್ತು ಈ ಎ.ಎಸ್. ಪ್ರಸನ್ ಇರಬಹುದು, ಬಿ.ಎಸ್. ಚಂದ್ರಶೇಖರ್‌ರವರು ಇರಬಹುದು ಅಂತಾರಾಷ್ಟ್ರೀಯ ಮಟ್ಟದ ಅನೇಕ ಕ್ರೀಡಾಪಟುಗಳು, ಅಂತಾರಾಷ್ಟ್ರೀಯ ಮಟ್ಟದ ಅನೇಕ ಪತ್ರಿಕಾಕರ್ತರನ್ನು ಕೇಳುತ್ತಿದ್ದರು. ಕಲೆಯ ಬಗ್ಗೆ ಅವರಿಗೆ ಇದ್ದಂಥ ಒಂದು ಆಸಕ್ತಿ, ಅವರಿಗೆ ನಾಟಕದ ಬಗ್ಗೆ

ಇದ್ದಂಥ ಆಸಕ್ತಿ ಅನೇಕ ವೇದಿಕೆಗಳನ್ನು ಕರ್ನಾಟಕದಲ್ಲಿ, ಬೆಂಗಳೂರಿನಲ್ಲಿ ನಿರ್ಮಾಣ ಮಾಡಿದ್ದಾರೆ, ಅದಕ್ಕೋಸ್ಕರವಾಗಿಯೇ ಅವರ ಕಲಾಭಿಮಾನಿಗಳೆಲ್ಲಾ ಸೇರಿ ಡಾ: ಹೆಚ್.ಎನ್. ರವರ ಹೆಸರಿನಲ್ಲಿ ಒಂದು ಕಲಾಕ್ಷೇತ್ರವೆಂದು ಕಟ್ಟಿಸಿರತಕ್ಕಂಥದ್ದು ಸಹಿತ ತಮಗೆ ಗೊತ್ತಿದೆ. ಬಸವನಗುಡಿ, ನ್ಯಾಷನಲ್ ಕಾಲೇಜ್, ಸ್ವಾತಂತ್ರ್ಯ ಹೋರಾಟ, ಎಂಇಎಸ್ ಸಂಸ್ಥೆ ಡಾ: ಹೆಚ್.ಎನ್. ಖಾದಿ ಇವು ಮರೆಯಲಿಕ್ಕೆ ಆಗದಿರತಕ್ಕಂಥ ವಿಚಾರಗಳು. ಇವತ್ತು ನಿಜವಾಗಲೂ ಒಂದು ಅಮೂಲ್ಯವಾದ ರತ್ನವನ್ನು ಕರ್ನಾಟಕ ಮತ್ತು ಭಾರತದೇಶ ಕಳೆದುಕೊಂಡಿದೆ ಎಂದು ಇವತ್ತು ನಾನು ಭಾವಿಸಿಕೊಂಡಿದ್ದೇನೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ, ಖಂಡಿತವಾಗಿಯೂ ಮಾನ್ಯ ವಾಟಾಳ್ ನಾಗರಾಜ್‌ರವರು, ಶ್ರೀರಾಮರೆಡ್ಡಿಯವರು ಮತ್ತು ಮಾನ್ಯ ಇನ್ನಿತರ ಗೌರವಾನ್ವಿತ ಶಾಸಕರುಗಳು ಕೊಟ್ಟಂಥ ಸಲಹೆಯನ್ನು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಾನು ಸಚಿವ ಸಂಪುಟದ ಸಭೆಯಲ್ಲಿ ಚರ್ಚೆ ಮಾಡಿ ಚಿರಾಯುವಾಗಿ ಅವರ ವಿಚಾರಗಳು ಇರುವ ಹಾಗೆ ಒಂದು ಕೆಲಸವನ್ನು ನಾವು ಕರ್ನಾಟಕದಲ್ಲಿ ಮಾಡೋಣ. ಅದು ಕರ್ನಾಟಕದ ಒಂದು ಹೆಮ್ಮೆಯ ಕೇಂದ್ರವಾಗುತ್ತದೆ ಎನ್ನುವುದನ್ನು ಹೇಳುವುದಕ್ಕೆ ನಾನು ಈ ಸಂದರ್ಭದಲ್ಲಿ ಬಯಸುತ್ತೇನೆ.

ಇನ್ನು ಮಾನ್ಯ ನಾಗರಾಜ್‌ರವರ ಬಗ್ಗೆ ಮಾನ್ಯ ಸಿದ್ದರಾಮಯ್ಯನವರು ಬಹಳ ಚೆನ್ನಾಗಿ ಹೇಳಿದರು. ಅಂತಾರಾಷ್ಟ್ರೀಯ ಕ್ರಿಕೆಟ್ ಕರ್ನಾಟಕದಲ್ಲಿ ಅದರಲ್ಲಿಯೂ ವಿಶೇಷವಾಗಿ ಬೆಂಗಳೂರಿನಲ್ಲಿ ಒಂದು ದಿನದ ಹಾಗೂ ಟೆಸ್ಟ್‌ಗಳು ನಡೆಯಬೇಕಾದರೆ, ಇವತ್ತು ಕ್ರಿಕೆಟ್ ಸ್ಟೇಡಿಯಂ ಬರಬೇಕಾದರೆ ನಾಗರಾಜ್‌ರವರು ಮಾಡಿರತಕ್ಕಂಥ ಸೇವೆ ಅತ್ಯಂತ ಅಮೂಲ್ಯವಾದದ್ದು ಎಂದು ನಾನು ತಿಳಿದುಕೊಂಡಿದ್ದೇನೆ. ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಅಷ್ಟೇ ಅಲ್ಲ, ಅವರು ಬಿಸಿಸಿಗೆ ಪ್ರಧಾನ ಕಾರ್ಯದರ್ಶಿಗಳಾಗಿದ್ದರು. ಬಿಸಿಸಿಗೆ ಅತ್ಯಂತ ಚಟುವಟಿಕೆಯನ್ನು ಕೊಟ್ಟಂಥವರೆಂದರೆ ಮಾನ್ಯ ಮಾಧವ್‌ರಾವ್ ಸಿಂಧ್ಯಾರವರು; ಯಾವಾಗಲೂ ಮಾಧವ್‌ರಾವ್ ಸಿಂಧ್ಯರವರು ಚುನಾಯಿತ ಸದಸ್ಯರಾದವರೂ ಸಹಿತ ಇವರನ್ನೇ ಪ್ರಧಾನ ಕಾರ್ಯದರ್ಶಿಗಳಾಗಿ ಮಾಡುತ್ತಿದ್ದರು. ಏಕೆಂದರೆ ಇವರು ಅತ್ಯಂತ ಪ್ರಾಮಾಣಿಕವಾಗಿ ಇರುತ್ತಿದ್ದರು. ಕ್ರಿಕೆಟ್ ಅಂದರೆ ನಾಗರಾಜ್‌ರವರು, ಆ ಕ್ರಿಕೆಟ್‌ನ್ನು ಭಾರತದ ಮಟ್ಟದಲ್ಲಿ ಅಂತಾರಾಷ್ಟ್ರೀಯ ಮಟ್ಟಕ್ಕೆ ತೆಗೆದುಕೊಂಡು ಹೋಗಿರುವಂಥವರಲ್ಲಿ ಸೇವೆ ಮಾಡಿದವರಲ್ಲಿ ನಾಗರಾಜ್‌ರವರು ಮೊದಲಿಗರು ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ನಾಗರಾಜ್‌ರವರ ನೋವು ನನಗೆ ಅರ್ಥವಾಗುತ್ತದೆ, ಅವರೊಂದಿಗೆ ಕೊನೆಯಲ್ಲಿ ನನಗೆ ಮಾತನಾಡುವುದಕ್ಕೆ ಆಗಲಿಲ್ಲ, ಅವರ ಕಂಠ ಗದ್ಗದಿತವಾಗಿತ್ತು. ಏಕೆಂದರೆ ಅವರು ಎಮೋಷನಲ್ಲಾಗಿ ಅಷ್ಟೊಂದು ಇಂಟಿಗ್ರೇಟ್ ಆಗಿದ್ದರು. ನಮ್ಮ ಗೌರವಾನ್ವಿತ ಸದಸ್ಯರ ಬಗ್ಗೆ ಅವರಿಗೆ ಎಷ್ಟೊಂದು

ಅಭಿಮಾನ ಇತ್ತು ಎಂದರೆ, ಯಾವುದಾದರೊಂದು ಕ್ರಿಕೆಟ್ ಮ್ಯಾಚ್ ಆದರೆ, ವಿಧಾನಸಭೆ ಮತ್ತು ವಿಧಾನ ಪರಿಷತ್ ಸದಸ್ಯರಿಗೆ ಕೊನೆಯ ಪಕ್ಷ ಎರಡು ಪಾಸ್ ಹೋಗಿದೆಯೋ ಇಲ್ಲವೋ ಎಂದು ಅವರು ವೆರಿಫೈ ಮಾಡುತ್ತಿದ್ದರು. ಮಾನ್ಯ ಹೆಗಡೆಯವರು ಮುಖ್ಯಮಂತ್ರಿಗಳು ಆಗಿದ್ದಂಥ ಸಂದರ್ಭದಲ್ಲಿ ಅವರು ಬಂದು, ಯಾವುದಾದರೂ ಕ್ರಿಕೆಟ್ ಮ್ಯಾಚ್ ಆಗುತ್ತಿದ್ದರೆ ಅವರ ಮಗಳ ಮದುವೆಯ ಆಮಂತ್ರಣದ ರೀತಿಯಲ್ಲಿ ಬಂದು ನಮ್ಮನ್ನು ಅವರು ಕರೆಯುತ್ತಿದ್ದರು. ಆ ಕಾಲ ಇವತ್ತು ಹೊರಟು ಹೋಗಿದೆ. ಆ ಬಾಂಧವ್ಯ ಆ ಸಂಬಂಧಗಳು ಹೊರಟು ಹೋಗಿವೆ. ವಿಧಾನಸಭೆ ಮತ್ತು ವಿಧಾನ ಪರಿಷತ್ ಸದಸ್ಯರುಗಳೆಂದರೆ ಯಾರು? ಅವರು ನಮ್ಮ ಮೂಲಾಜಿನಲ್ಲಿರುವವರು ಎನ್ನುವ ಪರಿಸ್ಥಿತಿ ಇವತ್ತು ಬಂದುಬಿಟ್ಟಿದೆ. ಅದು ಬಹಳ ನೋವಿನ ವಿಚಾರವಾಗಿದೆ. ಮಾನ್ಯ ನಾಗರಾಜ್‌ರವರು ಹಾಗೂ ಶ್ರೀರಾಮರೆಡ್ಡಿಯವರು ಹೇಳಿರತಕ್ಕಂತಹ ವಿಚಾರಮನಗಂಡಿದ್ದೇವೆ. ಸಮಯ ಬಂದಾಗ ಅವಕಾಶ ಬಂದಾಗ ಖಂಡಿತವಾಗಿಯೂ ಅದನ್ನು ಸರಿಪಡಿಸಬೇಕಾಗುತ್ತದೆ. ಶ್ರೀ ನಾಗರಾಜ್‌ರವರ ಹೆಸರು ಕ್ರಿಕೆಟ್ ರಂಗದಲ್ಲಿ ಚಿರಾಯುವಾಗಿ ಉಳಿಯುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅವರು ನಮ್ಮ ಊರಿನವರು ಎಂದು ಹೇಳಿಕೊಳ್ಳುವುದಕ್ಕೆ ಬಹಳ ಹೆಮ್ಮೆಯಾಗುತ್ತದೆ. ಅವರ ಹೆಸರಿನಲ್ಲಿ ನಾವು ಏನಾದರೊಂದು ಅವಿಸ್ಮರಣೀಯವಾಗಿರತಕ್ಕಂತಹ ಒಂದು ಸ್ಮಾರಕವನ್ನು ಮಾಡಬೇಕಾಗುತ್ತದೆ. ಅದರ ಬಗ್ಗೆ ಸರ್ಕಾರದಿಂದ ಖಂಡಿತವಾಗಿಯೂ ಅದನ್ನು ಮಾಡೋಣವೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಕ್ರಿಕೆಟ್ ಅಸೋಸಿಯೇಷನ್ ವ್ಯವಹಾರದ ಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈ ವಿಚಾರ ಬಂದಿದೆ; ಅದು ಸರ್ಕಾರದ ಗಮನಕ್ಕೂ ಸಹಿತ ಬಂದಿದೆ. ಅದನ್ನು ಸರಿಪಡಿಸುವ ಬಗ್ಗೆ ನಾವು ಸರಿಯಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ, ಈ ಸಂದರ್ಭದಲ್ಲಿ ಅದರ ಬಗ್ಗೆ ಹೇಳುವುದಕ್ಕೆ ಉಚಿತವಲ್ಲ ಎಂದು ತಿಳಿದು ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ನಾನು ಈ ಸಂದರ್ಭದಲ್ಲಿ ಕೋರುತ್ತೇನೆ. ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ, ಸಾಮಾನ್ಯವಾಗಿ ಸಭಾನಾಯಕರು, ಉಪನಾಯಕರಿಗೆ ಕೊಡುವಂತಹದ್ದು ಆದರೂ ಸಹಿತ ತಾವು ನಾನು ಹೆಚ್.ಎನ್. ರವರ ವಿದ್ಯಾರ್ಥಿಯಾಗಿ ಇಲ್ಲಿ ಅನೇಕ ಜನ ವಿದ್ಯಾರ್ಥಿಗಳಿದ್ದಾರೆ. ಅವರ ಪರವಾಗಿ ನಾಡಿನ ಅತ್ಯುನ್ನತ ಒಂದು ವೇದಿಕೆ ಯಾಗಿರುವಂತಹ ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡುವುದರ ಬಗ್ಗೆ ತಾವು ನನಗೆ ದೊಡ್ಡ ಮನಸ್ಸು ಮಾಡಿ ಅವಕಾಶವನ್ನು ಮಾಡಿಕೊಟ್ಟಿದ್ದೀರಿ; ಶ್ರೀ ಹೆಚ್. ನರಸಿಂಹಯ್ಯನವರ ಆತ್ಮ ಚಿರಶಾಂತಿಯಾಗಿರಲಿ ಎಂದು ಹೇಳಿ ಅವರ ಲಕ್ಷಾಂತರ ಜನ ವಿದ್ಯಾರ್ಥಿಗಳನ್ನು ಅನಾಥರನ್ನಾಗಿ ಮಾಡಿ ಹೋಗಿದ್ದಾರೆ. ನಮಗೆಲ್ಲರಿಗೂ ಬಹಳ ಮನಸ್ಸಿಗೆ ನೋವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಎಲ್ಲಾ ಮಾನ್ಯ ಸಭಾನಾಯಕರು, ವಿರೋಧಪಕ್ಷದ ನಾಯಕರು, ಎಲ್ಲಾ ಹಿರಿಯ ಸದಸ್ಯರುಗಳು ಅಗಲಿದ ಈ ಒಂದು ಹಿರಿಯ ಜೀವಕ್ಕೆ ಶ್ರದ್ಧಾಂಜಲಿಯನ್ನು ಅರ್ಪಿಸಿದ್ದಾರೆ, ಇದರಲ್ಲಿ ಹೆಚ್ಚಿನ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕಿಂತ ಹೆಚ್ಚಾಗಿ ಶ್ರೀ ಹೆಚ್.ಎನ್. ರವರ ಬದುಕು ತೆರೆದ ಪುಸ್ತಕವಾಗಿದೆ. ಆ ತರಹದ ಖಾಸಗಿ ಬದುಕನ್ನು ಸಾರ್ವಜನಿಕಗೊಳಿಸುವಂತಹದ್ದು, ಬಹಳ ಪಾರದರ್ಶಕ ವ್ಯಕ್ತಿತ್ವವನ್ನು ಇಟ್ಟುಕೊಂಡವರಿಗೆ ಮಾತ್ರ ಅದು ಸಾಧ್ಯವಾಗುತ್ತದೆ. ಅನೇಕರು ನಾವೆಲ್ಲರೂ ಖಾಸಗಿ ಬದುಕನ್ನು ಪ್ರತ್ಯೇಕವಾಗಿಟ್ಟುಕೊಂಡಿರುತ್ತೇವೆ. ಪ್ರಾಯಶ: ಮಹಾತ್ಮ ಗಾಂಧೀಜಿಯವರನ್ನು ಬಿಟ್ಟರೆ ಖಾಸಗಿ ಬದುಕು ಮತ್ತು ಸಾರ್ವಜನಿಕ ಬದುಕು ಇವು ಭಿನ್ನವಾಗಿರುವಂತಹದ್ದು ಇರಲಿಕ್ಕಿಲ್ಲ. ಆದರೆ ಇವರು ಕೊನೆಗಳಿಗೆವರೆಗೂ ಕೂಡ ತಮ್ಮ ನ್ಯಾಷನಲ್ ಕಾಲೇಜು ಹಾಸ್ಟಲ್‌ನಲ್ಲಿ ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದಂತೆ ಒಂದು ಚಾಪೆಯನ್ನು ಹಾಸಿಕೊಂಡು ಆ ಕೋಣೆಯಲ್ಲಿರುತ್ತಿದ್ದರು. ಅವರಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಮಾತನಾಡತಕ್ಕಂತಹ ಯಾವುದೇ ಸಂದರ್ಭವಿರುತ್ತಿರಲಿಲ್ಲ. ನಾನು ಅವರ ವಿದ್ಯಾರ್ಥಿ ಅಲ್ಲ. ನಾನು ಅವರನ್ನು ಬಹಳ ವರ್ಷಗಳಿಂದ ಹತ್ತಿರದಿಂದ ಬಲ್ಲವನಾಗಿದ್ದೇನೆ. ಮತ್ತು ಅಲ್ಲಿರುವಂತಹ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಅದು ವಿನೋಬಾಜಿಯವರ ವಿಚಾರಕ್ರಾಂತಿಯ ಸಂದರ್ಭ ವಾಗಿರಬಹುದು. ಅಥವಾ ಗಾಂಧೀಜಿ ಸಮೂಹದಲ್ಲಿ ನಡೆಯತಕ್ಕಂತಹ ಅನೇಕ ಚಟುವಟಿಕೆಗಳಾಗಿರಬಹುದು. ಅಥವಾ ಕಲಾ ಕ್ಷೇತ್ರದಲ್ಲಿ ನಡೆಯತಕ್ಕಂತಹ ರಂಗಚಟುವಟಿಕೆಗಳಾಗಿರ ಬಹುದು. ಅಲ್ಲಿ ಮಾನ್ಯ ನರಸಿಂಹಯ್ಯನವರು ಉಪಸ್ಥಿತಿ, ಮಾರ್ಗದರ್ಶನ ಮತ್ತು ಹೋರಾಟ ಎಲ್ಲಾ ಕಾಲದಲ್ಲಿಯೂ ಕಂಡಂತವರಾಗಿದ್ದೇವೆ. ನಾನು 1978ರಲ್ಲಿ ವಿಧಾನಸಭೆ ಚುನಾವಣೆಯಲ್ಲಿ ಸೋತಾಗ ನಾನು ನನ್ನ ಮಗನನ್ನು ಎಲ್ಲಿಗೆ ಸೇರಿಸಬೇಕೆಂಬ ಬಗ್ಗೆ ವಿಚಾರ ಬಂದಾಗ ಅವರು ಇಲ್ಲಿಯೇ ಕಳುಹಿಸಿಕೊಟ್ಟುಬಿಡು ಎಂದು ಹೇಳಿದರು. ಅವರು ನನ್ನ ಮಗನನ್ನು ತಮ್ಮ ಕೋಣೆಯಲ್ಲಿಯೇ ಸುಮಾರು 4 ವರ್ಷಗಳ ಕಾಲ ಇಟ್ಟುಕೊಂಡು ಆತನು ಹೈಸ್ಕೂಲ್ ಓದಲು ಅನುಕೂಲ ಮಾಡಿಕೊಟ್ಟರು. ಅದು ದೊಡ್ಡವರಿಗಾಗಿ ಮೀಸಲಾಗಿರುವಂತಹ ಹಾಸ್ಟಲ್, ಅಲ್ಲಿ ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಕೊಡುತ್ತಿರಲಿಲ್ಲ. ಆದರೆ ಅದಕ್ಕೊಂದು ವ್ಯತ್ಯಾಸವನ್ನು ಮಾಡಿ ಅಪವಾದವನ್ನಾಗಿ ಮಾಡಿ ತಮ್ಮ ಕೋಣೆಯಲ್ಲಿಯೇ ಇಟ್ಟುಕೊಂಡು ಅವರು ನನಗೆ ದೊಡ್ಡ ಉಪಕಾರವನ್ನು ಮಾಡಿದ್ದಾರೆ. ಇವತ್ತು ನಾವು ಜೀವನದೃಷ್ಟಿಯನ್ನು, ವೈಜ್ಞಾನಿಕವಾಗಿ, ವೈಚಾರಿಕವಾಗಿ ವಿಮರ್ಶೆ ಮಾಡುವುದಕ್ಕೆ ಸಾಧ್ಯತೆ ಇದ್ದರೆ ಅಂತಹವರ ಒಡನಾಟ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಅದಕ್ಕಿಂತಲೂ ವೈಚಾರಿಕನಾಗಿರುವಂತಹ ಒಬ್ಬ ವ್ಯಕ್ತಿ ಭಾವುಕನಾಗಿರುವುದಿಲ್ಲ. ಭಾವುಕನಾಗಿರುವಂತಹ ವ್ಯಕ್ತಿ ಅನೇಕ ಬಾರಿ ಮೂಢನಂಬಿಕೆಗಳಿಗೆ ಒಳಗಾಗುತ್ತಾನೆ.

ಅವನು ತನ್ನ ವೈಚಾರಿಕತೆಯನ್ನು ಕಳೆದುಕೊಳ್ಳುತ್ತಾನೆ. ಆದರೆ ಇಲ್ಲಿ ವೈಚಾರಿಕತೆ ಮತ್ತು ಭಾವುಕತೆ ಜೊತೆ ಜೊತೆಗೆ ಹೋಗಿರತಕ್ಕಂಥ ಒಬ್ಬ ಅಪರೂಪದ ವ್ಯಕ್ತಿ ಇವರಾಗಿದ್ದಾರೆ. ಬಡವರ ಬಗ್ಗೆ ಸದಾ ಕನಿಕರವಿರುವಂತಹವರು, ಹಿಂದುಳಿದ ಜನಾಂಗದ ಬಗ್ಗೆ ಏನಾದರೂ ಮಾಡಬೇಕೆನ್ನುವಂತಹ ವಿಚಾರದಲ್ಲಿ, ಅದು ಮೀಸಲಾತಿಯ ವಿಚಾರವಾಗಿರಬಹುದು, ಮತ್ತೊಂದಾಗಿರಬಹುದು, ಅವರು ಬದುಕುತ್ತಿದ್ದಂತಹ ವಾತಾವರಣ ಎಲ್ಲವೂ ಕೂಡ ಮೇಲ್ಜಾತಿಯುವರಿಗೆ ಸಂಬಂಧಪಟ್ಟವರ ಜೊತೆಗೆ ಇದೆ. ಅವರ ವಿದ್ಯಾಸಂಸ್ಥೆಗಳಾಗಿರಬಹುದು, ಅವರ ಓಡನಾಟವೇ ಇರಬಹುದು, ಕಲಾಸಂಸ್ಥೆಯನ್ನು ಕಟ್ಟಿರುವಂತಹ ಸನ್ನಿವೇಶದಲ್ಲಿ ವ್ಯಕ್ತಿಗತವಾದಂತಹ ಹೋರಾಟವನ್ನು ಅವರು ಎಂದೂ ಕೂಡ ಮಾಡಲಿಲ್ಲ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಇತ್ತೀಚಿನ ದಿನಮಾನಗಳಲ್ಲಿ ಹೆಸರು ಮಾಡಿದಂತಹ ಎರಡೇ ಎರಡು ಉಪ ಕುಲಪತಿಗಳು ಎಂದರೆ, ಡಾ: ನಂಜುಂಡಪ್ಪನವರು ಹಾಗೂ ಮಾನ್ಯ ಹೆಚ್. ನರಸಿಂಹಯ್ಯನವರು. ಅವರಿಬ್ಬರನ್ನು ಬಿಟ್ಟರೆ ಪ್ರಾಯಶ: ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಶಿಸ್ತಿಗೆ ಒಳಪಡುವಂತಹ ರೀತಿಯಲ್ಲಿ ಅದು ಆಗಿರಲಿಲ್ಲ. ಆ ರೀತಿಯ ಶಿಸ್ತನ್ನು ಶೈಕ್ಷಣಿಕ ಸಂಯಮವನ್ನು ಅದಕ್ಕೆ ಬೇಕಾಗಿರುವಂತಹ ಉನ್ನತ ಸ್ಥಾನಮಾನವನ್ನು ತಂದುಕೊಟ್ಟರು. ಅದು ಯಾವುದೇ ಸರ್ಕಾರವಾಗಿದ್ದರೂ ಕೂಡ ಈ ತರಹದ ನಿರ್ಧಾರಗಳನ್ನು ಮಾಡಬೇಕಾದರೆ ಅಥವಾ ಪ್ರಶಸ್ತಿ ಪ್ರಧಾನ ಮಾಡಬೇಕಾದಂತಹ ಸಂದರ್ಭ ಸನ್ನಿವೇಶಗಳು ಇದ್ದರೆ ಆಗ ಹೆಚ್. ನರಸಿಂಹಯ್ಯನವರನ್ನು ಅಧ್ಯಕ್ಷರನ್ನಾಗಿ ಮಾಡುವಂತಹದ್ದು ಒಂದು ಸಂಪ್ರದಾಯವಾಗಿಯೇ ಬೆಳೆದಿತ್ತು. ಅಂದರೆ ಅವರು ಯಾವುದೇ ಪಕ್ಷ ಅನ್ನುವುದಕ್ಕಿಂತಲೂ ಹೆಚ್ಚಾಗಿ ಒಬ್ಬ ಗೌರವಾನ್ವಿತವಾಗಿರುವಂತಹ ಕನ್ನಡನಾಡಿನ ಒಬ್ಬ ವ್ಯಕ್ತಿಯಾಗಿದ್ದರು. ಈಗಾಗಲೇ ಶ್ರೀರಾಮರೆಡ್ಡಿಯವರು ಹೇಳಿದಂತೆ ಅವರ ಊರಿನಲ್ಲಿ ಅವರು ಕಟ್ಟಿರುವಂತಹ ಶಾಲೆಗೆ ಅಲ್ಲಿ ಮಾಡಿರುವಂತಹ ಕೆಲಸ ಕಾರ್ಯಗಳನ್ನು ತೋರಿಸುವುದಕ್ಕಾಗಿ ಅವರಿಗೆ ಬಹಳ ಹಿಗ್ಗಾಗುತ್ತಿತ್ತು. ನಮ್ಮನ್ನು ಅನೇಕಬಾರಿ ಅಲ್ಲಿಗೆಲ್ಲಾ ಕರೆದುಕೊಂಡು ಹೋಗುತ್ತಿದ್ದರು. ಬಹಳ ಸರಳವಾಗಿರುವಂತಹ ಜೀವನ. ಅವರು ಗಾಂಧಿವಾದಿಗಳನ್ನು ಎನ್ನುವುದಕ್ಕಿಂತ ಹೆಚ್ಚಾಗಿ ಒಬ್ಬ ಹಳ್ಳಿಗನಾಗಿದ್ದ. ಒಬ್ಬ ಭೌತವಿಜ್ಞಾನಿ ಹಳ್ಳಿಗನಾಗಿ ಬದುಕಬೇಕು ಎನ್ನುವಂತಹ ರೀತಿಯಲ್ಲಿ ಅವರು ತಮ್ಮ ಜೀವನವನ್ನು ನಡೆಸಿಕೊಂಡು ಹೋದಾಗ ಸರಳತೆ, ಅವರ ಮನುಷ್ಯನ ವೈಚಾರಿಕತೆಗೆ ಒಂದು ಕಿರೀಟವಾಗಿ ಇರುವುದು ಕಂಡುಬರುತ್ತಿತ್ತು. ಯಾರು ಸರಳವಾಗಿ ಇರುವುದಿಲ್ಲ? ಅವರು ಸಂಕೀರ್ಣವಾಗಿಯೂ ಕೂಡ ಇರುವುದಿಲ್ಲ. ಅವರಲ್ಲಿ ಯಾವುದೇ ತರವಾಗಿರತಕ್ಕಂತಹ ಮೂಲ ಕ್ರಿಯಾ ಚಟುವಟಿಕೆಗಳಿಗಾಗಲಿ, ಅಥವಾ ಸ್ವಜನಾತ್ಮಕವಾದಂತಹ ಯೋಜನೆಗಳಿಗಾಗಲಿ, ಯಾವುದೇ ಒಂದು ಭದ್ರ ಬುನಾದಿ ಎನ್ನುವುದು ಇರುವುದಿಲ್ಲ. ಆದರೆ ಸರಳವಾದಂತಹ ವ್ಯಕ್ತಿಗೆ ಉನ್ನತ ವಿಚಾರಗಳು ತನ್ನಷ್ಟಕ್ಕೆ ತಾನೇ ಹೊಳೆಯುತ್ತದೆ.

ಅನೇಕರು ಸರಳರಾಗಿರುತ್ತಾರೆ. ಆದರೆ ಬೋಳೆಯಾಗಿರುತ್ತಾರೆ, ಈ ಬೋಳೆ ಗಾಂಧಿಗಳ ವಿರೋಧವಾಗಿ ಇವರು ಎಷ್ಟು ದಿವಸ ಹೋರಾಟ ಮಾಡಿದರು ಅಂದರೆ ಕನ್ನಡನಾಡಿನ ಉದ್ದಗಲಕ್ಕೂ ಕೂಡ ಡಾ: ಕೋವೂರ್‌ರವರನ್ನು ಕರೆಸಿ ಅವರು ಅವತ್ತು ಸತ್ಯಸಾಯಿಬಾಬಾರವರ ವಿರುದ್ಧ ಮಾತನಾಡತಕ್ಕಂಥದ್ದು ಅಂದರೆ ಇವತ್ತಿಗೂ ಕೂಡ ಬಹಳ ವಿರೋಧವಾಗಿರುವಂಥದ್ದು. ಅಂತಹ ಸನ್ನಿವೇಶಗಳಲ್ಲಿ ಈ ರೀತಿಯ ಚಮತ್ಕಾರಗಳ ಮೂಲಕವಾಗಿ ಸಂಮೋಹನವನ್ನು ಮಾಡುವುದರ ಮೂಲಕವಾಗಿ ಈ ಮೂಢನಂಬಿಕೆಯನ್ನು ದೇಶದಲ್ಲಿ ಯಾವ ರೀತಿಯಾಗಿ ಬೆಳೆಸಬಹುದು ಎನ್ನುವುದಕ್ಕಾಗಿಯೇ ಅವರು ಬೀದಿನಾಟಕಗಳ ಪರಂಪರೆಯನ್ನು ಬೆಳೆಸಲಿಕ್ಕೆ ಅವರು ನ್ಯಾಷನಲ್ ಕಾಲೇಜನ್ನು ಮೊದಲು ಬಿಟ್ಟುಕೊಟ್ಟರು. ಆ ಬೀದಿನಾಟಕಗಳು ಅಲ್ಲಿಂದ ಪ್ರಾರಂಭವಾಯಿತು, ಡಾ: ಕೋವೂರ್‌ರವರನ್ನು ಶ್ರೀಲಂಕಾದಿಂದ ಕರೆಸಿ ಇದೇ ಬೆಂಗಳೂರಿನಲ್ಲಿ ಒಂದು ಲಕ್ಷ ರೂಪಾಯಿಗಳ ಬಹುಮಾನವನ್ನು ಕೊಡಿಸುತ್ತೇನೆಂದು ಘೋಷಣೆಯನ್ನು ಕೂಡ ಮಾಡಿಸಿದರು. ಯಾರಾದರೂ ಈ ತರಹ ಬೂದಿ ಕೊಡುವಂತಹದ್ದು, ಉಂಗುರವನ್ನು ಕೊಡುವಂಥದ್ದು, ಸರ ಕೊಡುವಂಥದ್ದು ಇದ್ದರೆ ಒಂದು ವಸ್ತುವನ್ನು ಮತ್ತೊಂದು ವಸ್ತುವಿನ ನಂತರ ಸ್ಥಳಾಂತರಿಸಬಹುದು ಎಂಬ ವಿಚಾರಗಳಲ್ಲಿ ಬಹಳ ವೈಜ್ಞಾನಿಕವಾದಂತಹ ಉತ್ತರವನ್ನು ಕಂಡುಹಿಡಿದರು. ಅದೇ ರೀತಿಯಾಗಿ ಮಾನ್ಯ ದಿವಂಗತ ಜಿ.ಹೆಚ್. ಪಟೇಲ್‌ರವರೂ ಕೂಡ ಇದ್ದರು. ಅವರಿಗೊಮ್ಮೆ ಸತ್ಯಸಾಯಿಬಾಬಾರವರು ಈ ರೀತಿಯಾಗಿ ಮಂತ್ರಿಸಿ ಉಂಗುರವನ್ನು ಮತ್ತು ಸರವನ್ನು ಕೊಟ್ಟರು. ಅವರ ಜೊತೆ ಬೇರೆ ಬೇರೆ ಅಧಿಕಾರಿಗಳಿದ್ದರು. ಅವರೆಲ್ಲರೂ ಬಹಳ ಭಾವುಕರಾಗಿದ್ದರು. ನೋಡಿ ಈ ತರಹ ಆಗಿದೆ ನಿಮಗೆಲ್ಲಾ ಕೊಟ್ಟರಲ್ಲಾ ಸಾರ್ ಈ ತರಹ. ಬಹಳ ಪುನೀತರಾದಿರಿ ಎಂದರು. ಆಗ ಜೆ.ಹೆಚ್. ಪಟೇಲ್‌ರವರು ಯಾವುದನ್ನು ಮುಷ್ಠಿಯಲ್ಲಿ ಹಿಡಿಯಬಹುದೋ ಅದನ್ನು ಸ್ಥಳಾಂತರಿಸಬಹುದು, ಯಾವುದನ್ನು ಮುಷ್ಠಿಯಲ್ಲಿ ಹಿಡಿಯುವುದಕ್ಕಾಗುವುದಿಲ್ಲ ಅದು ಆಗುವುದಿಲ್ಲ, ಆದ್ದರಿಂದ ನನಗೆ ಒಂದು ಟ್ರ್ಯಾಕ್ಟರ್ ಕೊಡಪ್ಪಾ ಎಂದು ಅವರಿಗೆ ಹೇಳಪ್ಪಾ ಎಂದರು. ಆ ತರಹ ಪಟೇಲ್‌ರವರು ತಮಾಷೆಯಾಗಿ ಹೇಳುತ್ತಿದ್ದರು. ಆದರೆ ಇವರು ಎಲ್ಲೂ ಕೂಡ ತಮಾಷೆಯಾಗಿ ಮಾತನಾಡತಕ್ಕಂತಹವರು ಅಲ್ಲ. ಆದರೆ ಅವರ ಆತ್ಮಕಥೆಯಲ್ಲಿ ಅನೇಕ ಘಟನೆಗಳನ್ನೂ ಕೂಡ ಬರೆದಿದ್ದಾರೆ. ಅವರು ಎಷ್ಟು ನೋವನ್ನು ಉಂಡಿದ್ದಾರೆ, ಬಡತನದಿಂದ ಮೇಲೆ ಬಂದಿರುವಂತಹದ್ದು, ಆ ವಿದ್ಯೆಗೆ ಸಂಬಂಧಪಟ್ಟಿರುವಂತಹ ವಿಚಾರಗಳ ಬಗ್ಗೆ ಬಹಳ ದೊಡ್ಡ ಕಳಕಳಿಯನ್ನು ಇಟ್ಟುಕೊಂಡಿದ್ದರು. ಅವರು ಸುಂದರ್‌ರಾಜ್, ವಿಷ್ಣುವರ್ಧನ್‌ರಂತಹ ಒಳ್ಳೆಯ ಚಲನಚಿತ್ರನಟರಿಂದ ಹಿಡಿದು ನಾಟಕ ರಂಗಭೂಮಿಯಲ್ಲಿರುವಂತಹ ಸಿಂಹರವರಿಂದ ಹಿಡಿದು ನಿಜಲಿಂಗಪ್ಪನವರ ಜೊತೆಗೆ ಸಂಪರ್ಕ ಇಟ್ಟುಕೊಂಡಿದ್ದರೂ ಕೂಡ ತಮ್ಮ

ಸರಳ ಜೀವನವನ್ನು ಮರೆತಂಥವರು ಅಲ್ಲ. ಅವರು ಕೊನೆಗಳಿಗೆಯಲ್ಲಿ ಮೈಸೂರಿಗೆ ಬಂದು ಚಾಮುಂಡೇಶ್ವರಿ ಪೂಜೆಯನ್ನು ಮಾನ್ಯ ಸಿದ್ದರಾಮಯ್ಯನವರು ಆಹ್ವಾನ ಕೊಟ್ಟರು ಎಂದು ಹೇಳಿದ್ದರು. ಆಗ ನಾನು ಮುಖ್ಯ ಅತಿಥಿಗಳಾಗಿ ಅವರ ಜೊತೆಗಿದ್ದೆ. ಮಾನ್ಯ ನಾಗರಾಜ್‌ರವರು ಹೇಳಿದಂತೆ ಸ್ಪಷ್ಟತೆ ಇರಲಿಲ್ಲವೆನ್ನುವುದಕ್ಕಿಂತ ಹೆಚ್ಚಾಗಿ ಪ್ರಾಯಶ: ಬದುಕಿನ ಇಳಿವಯಸ್ಸಿನಲ್ಲಿ ಇಂತಹ ಅನೇಕ ಸಮಸ್ಯೆಗಳು ಮತ್ತು ಗೊಂದಲಗಳು ಏಕತಾನಗಳು ಬರುತ್ತವೆ. ಎಂ.ಸಿ. ಚಾಗ್ಲಾರವರು ತಮಗೆ ಗೊತ್ತಿದ್ದಂತೆ ಮಾನ್ಯ ಸುಪ್ರೀಂಕೋರ್ಟಿನ ದೊಡ್ಡ ಜಡ್ಜ್ ಆಗಿದ್ದರು. ನಮ್ಮ ದೇಶದ ಶಿಕ್ಷಣ ಮಂತ್ರಿಗಳಾಗಿದ್ದರು. ಅವರು ಎಂದೂ ಕೂಡ ಮಸೀದಿಗೆ ಹೋಗಿ ಪ್ರಾರ್ಥನೆ ಮಾಡಿದವರಲ್ಲ. ಪ್ರವಾದಿಗಳಲ್ಲಿ ನಂಬಿಕೆಯನ್ನು ಇಟ್ಟುಕೊಂಡಥವರೂ ಅಲ್ಲ. "ರೋಸನ್ ಇನ್ ಡಿಸೆಂಬರ್" ಎಂದು ಹೇಳಿ ಒಂದು ಉತ್ತಮವಾದಂತಹ ಆತ್ಮಕಥೆಯನ್ನು ಬರೆದಿದ್ದರು. ಆ ಬದುಕಿನ ಇಳಿವಯಸ್ಸಿನಲ್ಲಿ ತಮ್ಮ ಹೆಂಡತಿ ಸತ್ತನಂತರ ಮಕ್ಕಳು ಬೇರೆ ಬೇರೆ ಕಡೆಗೆ ಕೆಲಸಕ್ಕೆ ಹೋದಾಗ ಅವರಿಗೆ ಒಂಟಿತನ ಆವರಿಸುತ್ತದೆ. ಆ ಒಂಟಿತನ ಆವರಿಸಿಕೊಂಡಾಗ ಒಂದು ಮಾತನ್ನು ಬರೆಯುತ್ತಾರೆ. 'If I had the faith, I would have clinged on to it' ಎಂದು ಯಾವುದಾದರೂ ಒಂದು ನಂಬಿಕೆ ಒಂದು ದೊಡ್ಡ ಅದ್ಭುತವಾದಂತಹ ಶಕ್ತಿ ಇದೆ ಎಂದು ಹೇಳಿ ನಾನು ಭಾವಿಸಿಕೊಂಡು ಆ ಪ್ರಾರ್ಥನೆಗೆ ನನ್ನನ್ನು ನಾನು ತೊಡಗಿಸಿಕೊಂಡಿದ್ದರೆ ಆ ನಂಬಿಕೆಯಲ್ಲಿಯೇ ನಾನು ಕಾಲವನ್ನು ಕಳೆಯಬಹುದಾಗಿತ್ತು. ಆದರೆ ಈ ಏಕತನ ಏನಿದೆ, ಏಕಾಕಿತನ ಎನ್ನುವುದು ನನ್ನನ್ನು ಕಾಡುತ್ತಿದೆ ಎನ್ನುವ ಮಾತನ್ನು ಬರೆದರು. ಹಾಗೆಯೇ ಡಾ: ಹೆಚ್. ನರಸಿಂಹಯ್ಯ ನವರು ಪ್ರಾಯಶ: ಇಳಿವಯಸ್ಸಿನಲ್ಲಿ ಅವರ ಆರೋಗ್ಯ ಇತ್ತೀಚಿನ ದಿನಮಾನಗಳಲ್ಲಿ ಚೆನ್ನಾಗಿರಲಿಲ್ಲ. ಆ ಕಾರಣಕ್ಕಾಗಿಯೇ ಅವರು ಪ್ರಾಯಶ: ಆ ತರಹದ ಒಂದು ನಿರಾಕರಿಸುವಂತಹದ್ದು ಏನಿದೆ ದೈವದ ನಿರಾಕರಣೆ ಅವರಲ್ಲಿ ಇರಲಿಲ್ಲ. ಆದರೆ ಮೂಢನಂಬಿಕೆಗಳ ನಿರಾಕರಣೆ, ದೇವಾಲಯಗಳ ನಿರಾಕರಣೆ ಇತ್ತು. ಅದನ್ನು ಅಂಬೇಡ್ಕರ್ ಅವರೂ ಕೂಡ ಪ್ರತಿಪಾದಿಸಿದರು. ಬಸವಣ್ಣನವರೂ ಕೂಡ ಪ್ರತಿಪಾದಿಸಿದ್ದರು. ಹಾಗೆ ಯಾವುದೋ ಒಂದು ದೊಡ್ಡ ಶಕ್ತಿ, ಇಡೀ ಪ್ರಕೃತಿಯನ್ನು ದೊಡ್ಡ ಶಕ್ತಿಯಾಗಿ ಆಡಿಸುತ್ತಿದೆ ಎನ್ನತಕ್ಕಂಥಾದ್ದರ ಬಗ್ಗೆ ವಿಶ್ವಾಸ ಇಟ್ಟುಕೊಂಡಿದ್ದಂಥವರು. ನಮ್ಮಂಥ ಎಲ್ಲಾ ಜನಗಳಿಗೂ ಕೂಡ ದೊಡ್ಡ ಮಾರ್ಗದರ್ಶನ ಮಾಡಿದಂಥವರು. ಅವರ ಕೊನೆಯಾಸೆ ಒಂದಿತ್ತು. ಅದನ್ನು ಹೇಳುವಂಥಾದ್ದು ಏನಿಲ್ಲ. ಪದ್ಮಭೂಷಣ ಪದವಿಯನ್ನು ಅವರಿಗೆ ನಾವು ಕೊಡಿಸಬೇಕಿತ್ತು. ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೂಡ ಈ ವಿಚಾರವನ್ನು ಬಿನ್ನಹ ಮಾಡಿದ್ದೇವೆ. ಕೊನೆಯ ಪಕ್ಷ ಮರಣೋತ್ತರವಾಗಿ ಅಂತಹ ಒಂದು ಪದವಿಯನ್ನು ಕೊಡಿಸಲಿಕ್ಕೆ ತಾವು ತಮ್ಮ ಪ್ರಭಾವವನ್ನು ಬೀರಬೇಕು ಎನ್ನುವಂಥಾದ್ದು ಮತ್ತು ಅನೇಕ ವಿಚಾರಗಳು, ಸಲಹೆಗಳು ಏನಿವೆ ಅವುಗಳ

ಪ್ರಕಾರ ನಡೆದುಕೊಳ್ಳಲಿಕ್ಕೆ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕು ಎಂದು ಹೇಳುತ್ತಾ ಮಾನ್ಯ ನಾಗರಾಜ್ ಅವರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಆಸಕ್ತಿಯನ್ನು ತಾಳಿದ್ದರು ಮತ್ತು ಮಾನ್ಯ ರಮೇಶ್‌ಕುಮಾರ್ ಮತ್ತು ಮಾನ್ಯ ವಾಟಾಳ್ ನಾಗರಾಜ್ ಅವರು ಅದರ ಬಗ್ಗೆ ನಿರಂತಹ ಹೋರಾಟ ಮಾಡಿದ್ದರು. ಒಮ್ಮೊಮ್ಮೆ ಅಧಿಕಾರ ಇದ್ದರೂ ಕೂಡ ಕೆಲವು ವಿಚಾರಗಳನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ದಿವಂಗತ ನಾಗರಾಜ್‌ರವರ ಆತ್ಮಕ್ಕೂ ಕೂಡ ಈ ಸಂದರ್ಭದಲ್ಲಿ ಶಾಂತಿಯನ್ನು ಕೋರಿ ನನಗೆ ಮಾತನಾಡಲು ಅವಕಾಶ ಕೊಟ್ಟಂಥ ತಮಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ಶಿಕ್ಷಣ ತಜ್ಞ ಡಾ: ಹೆಚ್. ನರಸಿಂಹಯ್ಯ ಅವರ ನಿಧನದಿಂದ ನಮ್ಮ ರಾಜ್ಯಕ್ಕೆ ಬಹಳ ನಷ್ಟವಾಗಿದೆ. ನಾನು ಬೆಳಿಗ್ಗೆ ಹತ್ತು ಗಂಟೆಗೆ ಹೋಗಿ ಅವರ ಅಂತಿಮ ದರ್ಶನ ಮಾಡಿಕೊಂಡು ಬಂದೆ. ಅಲ್ಲಿ ಬಹಳ ಜನಸ್ತೋಮ; ವಿಪರೀತ ಜನರು ಇದ್ದರು. ನನಗೂ ಮತ್ತು ಅವರಿಗೂ ಬಹಳ ಸ್ನೇಹ, ಏಕೆಂದರೆ ಅನೇಕ ಸಾರಿ ಅವರು ಸಲಹೆಗಳನ್ನು ಕೊಡುತ್ತಿದ್ದರು. 'ಮಂಜುನಾಥ್‌ರವರೇ, ನೀವು ವಿದ್ಯಾಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದೀರಿ, ವಿದ್ಯಾ ಮಂತ್ರಿಗಳಾಗಿದ್ದೀರಿ' ಒಳ್ಳೆಯ ಕೆಲಸ ಮಾಡಿ ಎಂದು ಸಲಹೆಗಳನ್ನು ಕೊಡುತ್ತಿದ್ದರು. ಅದರ ಜತೆಗೆ ಈಗ ಬೆಂಗಳೂರು ವಿಶ್ವವಿದ್ಯಾಲಯ ಅಂತ ಇವತ್ತಿನ ದಿವಸ ಏನಿದೆ, ಅದಕ್ಕೆ ಅವರು ವೈಸ್ ಚಾನ್ಸಲರ್ ಆಗಿದ್ದಾಗ 'ಜ್ಞಾನಭಾರತಿ' ಎಂದು ಹೆಸರನ್ನು ಇಟ್ಟವರು ಅವರೇ. ನಾನು ಈಗ ಒಂದು ತಿಂಗಳ ಕೆಳಗೆ ಅವರು ಕಾಯಿಲೆ ಬಿದ್ದಿದ್ದಾಗ ಅವರನ್ನು ನೋಡುವುದಕ್ಕೆ ಹೋಗಿದ್ದೆ. ಜ್ಞಾನಭಾರತಿ ಎಂದು ಹೆಸರು ಇಟ್ಟವರು ಅವರು. ಅದಕ್ಕೋಸ್ಕರ ಅವರದೊಂದು ನಾಮಫಲಕವನ್ನು ಹಾಕಬೇಕೆಂದು ಹೇಳಿ ಅದನ್ನು ಕೆತ್ತಿಸಿ ಅಲ್ಲಿ ಅದನ್ನು ಅನಾವರಣ ಮಾಡಿ ಬಂದೆ. ಆ ದಿವಸ ಒಂದು ಹಾರ ಮತ್ತು ಶಾಲನ್ನು ತೆಗೆದುಕೊಂಡು ಆಸ್ಪತ್ರೆಗೆ ಹೋದರೆ ಶಾಲು ಬೇಡವೆಂದರೆ. ನಂತರ ಅವರಿಗೆ ಹಾರ ಹಾಕಿ ಬಂದೆವು. ಅಂತಹ ಒಬ್ಬ ಸರಳ ಜೀವಿ ಅವರಾಗಿದ್ದರು. ಇವತ್ತು ಬೆಳಿಗ್ಗೆ ನೋಡಿದಾಗ ನನಗಂತೂ ಬಹಳ ದು:ಖವಾಯಿತು. ಬಹಳ ದೊಡ್ಡ ಜನಸ್ತೋಮ ಅಲ್ಲಿ ಸೇರಿತ್ತು ಮತ್ತು ನನಗೆ ಒಳಗಡೆಗೆ ಹೋಗಲಿಕ್ಕೇ ಕಷ್ಟವಾಯಿತು. ಇವತ್ತು ಮಾನ್ಯ ಶ್ರೀರಾಮರೆಡ್ಡಿಯವರು ಅವರದ್ದೊಂದು ಅಧ್ಯಯನ ಕೇಂದ್ರ ಮಾಡಬೇಕೆಂದು ಹೇಳಿದರು. ನಾನು ಅದನ್ನು ಮೊನ್ನೆಯೇ ಹೇಳಿದ್ದೆ. ಅವರ ನಾಮಫಲಕವನ್ನು ಅನಾವರಣ ಮಾಡಿದ ದಿವಸ ಅವರ ಜ್ಞಾಪಕಾರ್ಥವಾಗಿ ಏನನ್ನಾದರೂ ಮಾಡಬೇಕೆಂದು ವೈಸ್ ಚಾನ್ಸಲರ್ ಅವರ ಹತ್ತಿರ ಮಾತನಾಡಿದಾಗ ಹೇಳಿದೆ. ಅದಕ್ಕೆ ಅವರು ಇಲ್ಲ ಸರ್ ಇದರ ಬಗ್ಗೆ ಚರ್ಚೆ ಮಾಡೋಣ ಎಂದು

† ಈ ಭಾಷಣವನ್ನು ಮಾನ್ಯ ಸಚಿವರಿಂದ ಪರಿಷ್ಕರಿಸಲ್ಪಟ್ಟಿದೆ.

ಅವರು ಹೇಳಿದರು. ಈ ರೀತಿ ಇವತ್ತಿನ ದಿವಸ ಅಮೋಘವಾದ ಸೇವೆಯನ್ನು ಸಲ್ಲಿಸಿದ ಅವರು ಇಲ್ಲಿ ಮಾತ್ರವಲ್ಲ ಗ್ರಾಮಾಂತರ ಪ್ರದೇಶಗಳಲ್ಲೂ ಸೇವೆ ಮಾಡಿದ್ದಾರೆ. ನಾನು ಬಾಗೇಪಲ್ಲಿಯ ಅವರದೇ ಆದ ಕಾಲೇಜಿಗೆ ಹೋಗಿದ್ದೆ. ಅಲ್ಲಿ ಒಂದು ಲೈಬ್ರರಿಯನ್ನು ತಮ್ಮ ಸ್ವಂತ ಖರ್ಚಿನಿಂದ ಅವರು ಮಾಡಿದ್ದಾರೆ. ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೋಸ್ಕರ ಅದನ್ನು ಅವರು ಮಾಡಿದ್ದರು ಇದೇ ರೀತಿ ದೊಡ್ಡಬಳ್ಳಾಪುರ ಕಾಲೇಜಿನಲ್ಲೂ ಅವರ ಒಂದು ಲೈಬ್ರರಿ ಇದೆ. ಈ ರೀತಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಬೇಕೆಂದು ಅವರು ಬಹಳವಾಗಿ ಹೇಳುತ್ತಿದ್ದರು. ಅವರು ಅದೇ ರೀತಿಯಲ್ಲಿ ಕೆಲಸವನ್ನು ಕೂಡ ಮಾಡಿದರು. ಅಂತಹ ಒಬ್ಬ ಮಹಾನ್ ವ್ಯಕ್ತಿ ಇವತ್ತಿನ ದಿವಸ ಕಣ್ಮರೆಯಾಗಿದ್ದಾರೆ. ನನಗಂತೂ ಬಹಳ ದು:ಖವಾಗಿದೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ಮಾನ್ಯ ಶ್ರೀರಾಮರೆಡ್ಡಿಯವರು ಏನು ಅವರ ಹೆಸರಿನಲ್ಲಿ ಒಂದು ಅಧ್ಯಯನ ಸಂಸ್ಥೆಯನ್ನು ಮಾಡಬೇಕೆಂದು ಹೇಳಿದ್ದಾರೋ, ನಾನಂತೂ ಈಗಾಗಲೇ ಅದರ ಬಗ್ಗೆ ಚರ್ಚೆ ಮಾಡಿದ್ದೇನೆ. ಅದನ್ನು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಮಾಡಬೇಕು. ಏಕೆಂದರೆ ಅವರು ಅಲ್ಲೇ ಅಮೋಘವಾದ ಸೇವೆ ಸಲ್ಲಿಸಿದ್ದಾರೆ. ಜ್ಞಾನಭಾರತಿ ಅಂತ ಹೆಸರನ್ನು ಇಟ್ಟವರೂ ಅವರೇ ಅಂತಹ ಒಬ್ಬ ಸರಳ ಜೀವಿ. ಈಗ ಮಾನ್ಯ ಎಂ.ಪಿ. ಪ್ರಕಾಶ್ ಅವರು ಹೇಳಿದ ಹಾಗೆ ನನ್ನ ಮಗನನ್ನು ಅಲ್ಲಿ ಬಿಟ್ಟಿದ್ದೆ. ಅವರ ಜತೆಯಲ್ಲಿ ಇಟ್ಟುಕೊಂಡು ಬಿ.ಎ. ವರೆಗೂ ಓದಿಸಿದರು. ಅಲ್ಲಿ ಬಹಳ ಜನ ಬಡವರ ಮಕ್ಕಳು ಇದ್ದರು. ಬಡವರ ಮಕ್ಕಳಿಗೂ ನೀವು ಆಶ್ರಯ ಕೊಡಬೇಕೆಂದು ನಾನು ಅವರಿಗೆ ಹೇಳುತ್ತಿದ್ದೆ. ನೀವು ಬರೇ ಮೆರಿಟ್ ಅಂತ ಹೇಳಿ ಸೀಟು ಕೊಡಬೇಡಿ, ಬಡವರಿಗೂ ಕೊಡಿ ಎಂದು ನಾನು ಹೇಳುತ್ತಿದ್ದೆ. ಅದೇ ರೀತಿ ಅವರು ಬಡವರ ಮಕ್ಕಳಿಗೂ, ಹಾಗೂ ಅನೇಕಾನೇಕ ಜನರಿಗೂ ಸಹಾಯ ಮಾಡಿದ್ದಾರೆ. ಅಂತಹ ಒಬ್ಬ ಮಹನೀಯರು ಇವತ್ತಿನ ದಿವಸ ಕಣ್ಮರೆಯಾಗಿದ್ದಾರೆ. ಇದರಿಂದ ರಾಜ್ಯಕ್ಕೆ ತುಂಬಲಾರದಷ್ಟು ನಷ್ಟವಾಗಿದೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ತಾವು ನನಗೆ ಈ ಒಂದು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) : ಮಾನ್ಯ ಅಧ್ಯಕ್ಷರೇ, ಮಾನ್ಯ ಡಾ: ಹೆಚ್. ನರಸಿಂಹಯ್ಯ ಅವರು ಇವತ್ತು ನಮ್ಮ ಮಧ್ಯದಲ್ಲಿ ಇಲ್ಲ. ಆದರೆ ಅವರ ವಿಚಾರಗಳು ಇವತ್ತು ನಮ್ಮ ಜತೆಗಿದ್ದಾವೆ. ಅವರು ಒಬ್ಬ ವಿಚಾರವಾದಿ ಮತ್ತು ವೈಚಾರಿಕತೆ ವಿಷಯದಲ್ಲಿ ವೈಯಕ್ತಿಕವಾಗಿ ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದಿಲ್ಲ, ಇಡೀ ಜಗತ್ತಿಗೆ, ಇಡೀ ಸಮಾಜಕ್ಕೆ ತೋರಿಸುವಂತಹ

ಕ್ರಿಯಾಶೀಲ ವ್ಯಕ್ತಿ ಡಾ: ಹೆಚ್. ನರಸಿಂಹಯ್ಯ ಆಗಿದ್ದರು. ಇಂದು ಬಹುಮುಖ್ಯವಾಗಿ ಅವರ ಬಗ್ಗೆ ಹೇಳುವುದಾದರೆ ಅವರು ಗಾಂಧೀವಾದಿಯಾಗಿದ್ದರು. ಇವತ್ತು ಬಹಳಷ್ಟು ಗಾಂಧಿವಾದಿಗಳನ್ನು ನಾವು ನೋಡುತ್ತಿದ್ದೇವೆ. ಗಾಂಧಿ ವಿಚಾರಗಳ ಬಗ್ಗೆ ಮಾತನಾಡುವುದನ್ನು ನಾವು ಕೇಳುತ್ತೇವೆ. ಆದರೆ ನಿಜವಾಗಿ ಗಾಂಧೀಜಿಯವರು ಏನೊಂದು ಹಾಕಿಕೊಟ್ಟಂಥ ಮಾರ್ಗಗಳು ಇವೆ, ವಿಚಾರಗಳು ಇವೆ ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಂಥ ವ್ಯಕ್ತಿ ಡಾ: ಹೆಚ್. ನರಸಿಂಹಯ್ಯನವರು ಆಗಿದ್ದರು. ಅವರು ಸರಳತೆಯಿಂದ ಕೊನೆಯವರೆಗೂ ಬದುಕಿದರು. ಈಗಾಗಲೇ ಕೆಲವು ನಾಯಕರು ಹೇಳಿದ ಪ್ರಕಾರ ಅವರು ಕೊನೆಯ ದಿವಸದವರೆಗೂ ನ್ಯಾಷನಲ್ ಹೈಸ್ಕೂಲ್‌ನ ಹಾಸ್ಟೆಲ್‌ನ ಒಂದು ಕೋಣೆಯಲ್ಲಿ ಅವರು ಚಾಪೆಯ ಮೇಲೆ ಮಲಗುತ್ತಿದ್ದರು. ಅಲ್ಲಿ ಕುರ್ಚಿ ವಗೈರೆ ಏನೂ ಇರಲಿಲ್ಲ. ಬೇರೆ ಯಾರಾದರೂ ಬಂದರೆ ಆ ಚಾಪೆಯ ಮೇಲೆಯೇ ಕುಳಿತುಕೊಳ್ಳಬೇಕಿತ್ತು. ಅಷ್ಟೊಂದು ಉನ್ನತ ಮಟ್ಟದ ಹೆಸರು ಪಡೆದುಕೊಂಡಂಥ, ಉನ್ನತ ವಿಚಾರಗಳು ಇರುವಂಥ ವ್ಯಕ್ತಿ ಬೇಕಾದಷ್ಟು ವೈಭವ ಪೂರ್ಣವಾಗಿ ಇರಬಹುದಾಗಿತ್ತು. ಅವರು ವೈಸ್ ಚಾನ್ಸಲರ್ ಆಗಿ ಕೆಲಸ ಮಾಡಿದಂಥವರು, ಶಿಕ್ಷಣ ಸಂಸ್ಥೆಗಳನ್ನು ಕಟ್ಟಿದಂಥವರು. ಆದರೆ ಯಾವುದೇ ಒಂದು ಸಾಮಾಜಿಕವಾದಂಥ ಈ ಒಂದು ಸಂದರ್ಭದಲ್ಲಿ ಸಾಮಾಜಿಕ ವಿಚಾರಗಳ ಬಗ್ಗೆ, ಗಾಂಧಿವಾದಿ ವಿಚಾರಗಳ ಬಗ್ಗೆ ತಮ್ಮ ಜೀವನದಲ್ಲಿ ಅನುಷ್ಠಾನ ಮಾಡಿದಂಥ ವ್ಯಕ್ತಿ ಡಾ: ಹೆಚ್. ನರಸಿಂಹಯ್ಯನವರು. ಅವರ ಬಗ್ಗೆ ಬಹಳ ಮುಖ್ಯವಾಗಿ ಹೇಳುವಂಥಾದ್ದು ಎಂದರೆ ಇವತ್ತು ಮೂಢನಂಬಿಕೆಗಳು, ಮೌಢ್ಯದ ಬಗ್ಗೆ, ಈ ಪವಾಡಗಳ ಬಗ್ಗೆ ಕೇವಲ ವಿರೋಧಿಸುವುದು ಅಷ್ಟೇ ಅಲ್ಲ, ಅವುಗಳ ಬಗ್ಗೆ ಜನಜಾಗೃತಿ ಮಾಡುವಂಥ ಕೆಲಸವನ್ನು ಅವರು ಮಾಡಿದ್ದಾರೆ. ಶ್ರೀಲಂಕಾದಿಂದ ಡಾ: ಕೋವೂರ್ ಅವರನ್ನು ಕರೆಸಿದ್ದರು. ಆಗ ಆ ಸಂದರ್ಭದಲ್ಲಿ ನಾವು ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದೆವು. ಆಗ ಡಾ: ನರಸಿಂಹಯ್ಯನವರ ಹೋರಾಟ, ಡಾ: ಕೋವೂರ್ ಅವರ ಹೋರಾಟ ಎಲ್ಲಾ ಯುವಕರಲ್ಲಿ ಆಕರ್ಷಣೆಯನ್ನು ಉಂಟು ಮಾಡಿತ್ತು. ಇವರುಗಳು ಏನೋ ಒಂದು ಜಾಗೃತಿಯನ್ನು ಉಂಟುಮಾಡುತ್ತಿದ್ದಾರೆ ಎನ್ನುವಂಥ ಭಾವನೆ ಜತೆಗೆ ಅವರ ಕಡೆ ಹೆಚ್ಚು ಲಕ್ಷ್ಯ ನಮಗೆಲ್ಲರಿಗೂ ಇತ್ತು. ಮತ್ತು ಇದರ ಮುಖಾಂತರ ಎಷ್ಟೋ ಒಂದು ಜಾಗೃತಿ ಆಗಿದ್ದನ್ನು ಆ ಸಂದರ್ಭದಲ್ಲಿ ನಾವು ನೋಡುತ್ತಿದ್ದೆವು. ಹೀಗಾಗಿ ಬಹುಶ: ನನಗನ್ನಿಸುತ್ತದೆ ಮಾನ್ಯ ನರಸಿಂಹಯ್ಯನವರು ಆರೋಗ್ಯವಂತರಾಗಿದ್ದಾರೆ ಮೊನ್ನೆ ನಡೆದಂಥ ಬೆನ್ನಿಹಿನ್ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಗಳು ಹೋಗುವುದನ್ನು ಅವರು ವಿರೋಧ ಮಾಡುತ್ತಿದ್ದರೋ ಏನೋ. ಅಂದರೆ ಆ ರೀತಿ ಒಂದು ಈ ಪವಾಡಗಳ ಬಗ್ಗೆ, ಮೂಢನಂಬಿಕೆಗಳ ಬಗ್ಗೆ ಸತತವಾಗಿ ಹೋರಾಟ ಮಾಡಿದಂಥ ವ್ಯಕ್ತಿ ನರಸಿಂಹಯ್ಯನವರು. ಅಂತಹವರು ಇವತ್ತು ನಮ್ಮ ಮಧ್ಯದಲ್ಲಿ ಇಲ್ಲ. ಇವತ್ತು ಗಾಂಧಿ ವಿಚಾರಗಳನ್ನು ನಾವು ಅಳವಡಿಸಿಕೊಳ್ಳುವಂಥಾದ್ದು, ಈ ಮೂಢನಂಬಿಕೆ,

ಪವಾಡಗಳ ವಿರುದ್ಧ ಹೋರಾಟ ಮಾಡುವಂಥಾದ್ದು ಆ ಒಂದು ಮನೋಸ್ಥಿತಿಯನ್ನು ತೆಗೆದುಕೊಂಡು ಹೋಗುವಂಥ ಕಾರ್ಯಚಟುವಟಿಕೆಯನ್ನು ಮಾಡಿದರೆ ಮಾತ್ರ ನಾವು ಅವರ ಆತ್ಮಕ್ಕೆ ನಿಜವಾಗಿ ಶಾಂತಿಯನ್ನು ಕೋರಿದಂತಾಗುತ್ತದೆ. ಮತ್ತು ಅವರು ಏನು ವಿಚಾರಗಳನ್ನು ಬಿತ್ತಿ ಹೋಗಿದ್ದಾರೆ. ಹಲವಾರು ಪುಸ್ತಕಗಳನ್ನು ಅವರು ಬರೆದಿದ್ದಾರೆ. ಶಿಕ್ಷಣ ವ್ಯವಸ್ಥೆ ಬಗ್ಗೆ, ವೈಚಾರಿಕತೆ ಬಗ್ಗೆ ಹಲವಾರು ಪುಸ್ತಕಗಳನ್ನು ಏನು ಬರೆದಿದ್ದಾರೆ ಅದರ ಬಗ್ಗೆ ಈಗಾಗಲೇ ಕೆಲವು ನಾಯಕರು ಹೇಳಿದ ಪ್ರಕಾರ ಅವರ ಹೆಸರಿನಲ್ಲಿ ಒಂದು ಅಧ್ಯಯನ ಸಂಸ್ಥೆಯನ್ನು ಮಾಡಬೇಕಾಗಿದೆ. ಕೇವಲ ಇಲ್ಲಿ ಒಂದು ಸಂತಾಪ ಸೂಚನೆ ಮುಖಾಂತರ ನಾವು ಅವರ ಆತ್ಮಕ್ಕೆ ಶಾಂತಿಯನ್ನು ಕೋರಿದರೆ ಅದು ಅಷ್ಟೇ ಸಾಲದು. ಆ ಅಧ್ಯಯನ ಸಂಸ್ಥೆ ಮುಖಾಂತರ ಇಡೀ ರಾಜ್ಯಕ್ಕೆ, ಇಡೀ ಸಮಾಜಕ್ಕೆ ಅವರ ವಿಚಾರಗಳು ನಿರಂತರವಾಗಿ ಅದರ ಬಗ್ಗೆ ಚಿಂತನೆ ನಡೆಯುವಂಥ ವ್ಯವಸ್ಥೆಯಾದಾಗ ಮಾತ್ರ ನಿಜವಾಗಿಯೂ ನಾವು ಅವರ ಆತ್ಮಕ್ಕೆ ಶಾಂತಿಯನ್ನು ಕೋರಿದ ಹಾಗೆ ಆಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೊಬ್ಬ ಮಹನೀಯರಾದಂಥ ನಾಗರಾಜ್ ಅವರ ಬಗ್ಗೆ ಈಗಾಗಲೇ ಸಾಕಷ್ಟು ವಿಚಾರಗಳು ಇಲ್ಲಿ ಬಂದಿವೆ. ಕ್ರಿಕೆಟ್ ಸಂಸ್ಥೆಯನ್ನು ಬೆಳೆಸಲಿಕ್ಕೆ, ಕ್ರಿಕೆಟ್ ಆಟದ ಬಗ್ಗೆ ಉತ್ಸುಕತೆಯನ್ನು ಮೂಡಿಸಲಿಕ್ಕೆ ಕಾರಣಕರ್ತರಾದಂಥ ಮಾನ್ಯ ನಾಗರಾಜ್‌ರವರು ತಮ್ಮ ಕೊನೆಯ ದಿವಸಗಳಲ್ಲಿ ಮಾನಸಿಕ ವ್ಯಥೆಯಿಂದ ನೊಂದು ತೀರಿಕೊಂಡರು ಎನ್ನುವಂಥಾದ್ದು. ಇದರ ಬಗ್ಗೆ ಸರ್ಕಾರ ಗಮನಹರಿಸಬೇಕು. ಮತ್ತು ಅವರ ಕುಟುಂಬ ವರ್ಗಕ್ಕೆ ದು:ಖವನ್ನು ಸಹಿಸುವ ಶಕ್ತಿಯನ್ನು ದೇವರು ಕೊಡಲಿ ಎಂದು ಹೇಳಿ ನಾಗರಾಜ್ ಅವರ ಆತ್ಮಕ್ಕೂ ಶಾಂತಿಯನ್ನು ಕೋರುತ್ತೇನೆ. ಈ ಇಬ್ಬರೂ ಮಹನೀಯರುಗಳು ಇಂದು ನಮ್ಮನ್ನು ಅಗಲಿ ಹೋಗಿದ್ದಾರೆ. ಅವರುಗಳ ಆತ್ಮಕ್ಕೆ ಶಾಂತಿ ಕೋರಿ ನಮ್ಮ ಪಕ್ಷದ ಪರವಾಗಿ ಅವರಿಗೆ ಗೌರವವನ್ನು ಸೂಚಿಸುವಂತಹ ಕೆಲಸವನ್ನು ನಾನು ಮಾಡುತ್ತಿದ್ದೇನೆ ಮತ್ತು ತಾವೇನು ಈ ಸಂತಾಪ ಸೂಚಕ ನಿರ್ಣಯವನ್ನು ತಂದಿದ್ದೀರಿ, ಅದಕ್ಕೆ ನಾನು ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಡಾ: ನರಸಿಂಹಯ್ಯನವರ ವಿಷಯದಲ್ಲಿ ನಮ್ಮ ನಾಯಕರು ಮತ್ತು ಉಪ ಮುಖ್ಯಮಂತ್ರಿಗಳು ಮತ್ತು ಅನೇಕ ಗಣ್ಯರು, ವಿರೋಧ ಪಕ್ಷದ ನಾಯಕರು ಎಲ್ಲರೂ ಮಾತನಾಡಿದ್ದಾರೆ. ನಮ್ಮ ಜಿಲ್ಲೆಯಿಂದ ಇಬ್ಬರು ಮಹಾನ್ ನಾಯಕರುಗಳಾದ ಸರ್. ಎಂ. ವಿಶ್ವೇಶ್ವರಯ್ಯನವರು ಮತ್ತು ಆ ಪಂಕ್ತಿಗೆ ಸೇರಿದಂಥ ಡಾ: ಹೆಚ್. ನರಸಿಂಹಯ್ಯನವರು, ಇವತ್ತು ಇವರಿಬ್ಬರನ್ನೂ ಕೂಡ ನಮ್ಮ ಜಿಲ್ಲೆ ಕಳೆದುಕೊಂಡಿದೆ ಅಲ್ಲದೆ ಇಡೀ ರಾಷ್ಟ್ರ ಮತ್ತು ರಾಜ್ಯಕ್ಕೆ ನಷ್ಟವಾಗಿದೆ ಎನ್ನುವಂಥಾದ್ದನ್ನು ನಾನು ಮೊದಲನೆಯದಾಗಿ ಹೇಳುತ್ತೇನೆ. ಇವತ್ತು ನರಸಿಂಹಯ್ಯನವರು ಒಬ್ಬ ದೊಡ್ಡ ಶಿಕ್ಷಣ ತಜ್ಞರು, ಸಮಾಜದ ಸುಧಾರಕರು,

ಮೂಢನಂಬಿಕೆಗಳ ಬಗ್ಗೆ ವಿರೋಧವನ್ನು ಮಾಡಿದಂಥ ಮಹಾನ್ ವ್ಯಕ್ತಿ. ಯಾವ ರೀತಿ ಹಿಂದೆ ರಾಜಾರಾಮ ಮೋಹನರಾಯ್ ಅವರು ಸತಿಸಹಗಮನ ಪದ್ಧತಿಯನ್ನು ವಿರೋಧ ಮಾಡಿದ್ದಕ್ಕೆ ಇವತ್ತೂ ಕೂಡ ನಾವು ಅವರನ್ನು ನೆನೆಸಿಕೊಳ್ಳುತ್ತೇವೆ. ಈ ತರಹ ಮೂಢನಂಬಿಕೆಗಳು ಈ ದೇಶದಲ್ಲಿ ಬಹಳ ತಳವನ್ನು ಮುಟ್ಟಿದ್ದಾವೆ.

ಇಂತಹ ಮೂಢನಂಬಿಕೆಗಳನ್ನು ಬೇರು ಸಮೇತ ಕಿತ್ತು ಹಾಕುವಂಥ ಕೆಲಸ ನಾವು 21ನೇ ಶತಮಾನಕ್ಕೆ ಕಾಲಿಟ್ಟರೂ ಕೂಡ ಇವತ್ತಿಗೂ ನಮ್ಮಿಂದ ಆಗುತ್ತಾ ಇಲ್ಲವೆನ್ನುವುದು ದುರಾದೃಷ್ಟಕರ ಸಂಗತಿ. ಇವತ್ತು ನಮ್ಮಲ್ಲಿ ಅನೇಕ ವಿಚಾರಗಳು, ಅಂದರೆ ಇವತ್ತಿಗೂ ವಿಡೋ ಮ್ಯಾರೇಜಸ್ ಒಂದು ಜಾತಿಯಲ್ಲಿ ಮಾಡಿಕೊಳ್ಳುತ್ತಾರೆ, ಉಳಿದ ಜಾತಿಗಳಲ್ಲಿ ಇಲ್ಲ. ಉತ್ತರ ಭಾಗದಲ್ಲಿ, ಜಾಟ್ಸ್ ಕಮ್ಯುನಿಟಿಯಲ್ಲಿ ವಿಡೋ ಆದಂಥ ಸಣ್ಣ ವಯಸ್ಸಿನ ಹೆಣ್ಣು ಮಕ್ಕಳಿಗೆ ಮತ್ತೆ ಮರು ಮದುವೆ ಇದೆ. ಆದರೆ, ನಮ್ಮ ಅನೇಕ ಸ್ವಾಮಿಗಳು ಈ ದಿಕ್ಕಿನಲ್ಲಿ ಚಿಂತನೆ ಮಾಡುತ್ತಾ ಇಲ್ಲವೆಂದು ನೊಂದು ಹೇಳಬೇಕಾಗುತ್ತದೆ. ಮಾನ್ಯ ನರಸಿಂಹಯ್ಯನವರು ಬಹಳ ತೀಕ್ಷ್ಣವಾಗಿ ಈ ಮೂಢ ನಂಬಿಕೆಗಳನ್ನು ತೆಗೆಯಲೇಬೇಕು ಎನ್ನುವಂಥಾದ್ದನ್ನು ಹೇಳುತ್ತಿದ್ದರು. ಆಗಲೇ ಎಂ.ಪಿ. ಪ್ರಕಾಶ್‌ರವರು ಹೇಳಿದ ಹಾಗೆ, 1972ರಲ್ಲಿ ಕೋವೂರ್‌ರವರನ್ನು ಕರೆದುಕೊಂಡು ನಮ್ಮ ರಾಜ್ಯದಾದ್ಯಂತ ಓಡಾಡಿಸಿದರು. ಅದಕ್ಕೆ, ಅವತ್ತೇ ನಾವೆಲ್ಲಾ ಸಹಮತ ತೋರಿಸಿದ್ದೆವು. ನಾವೆಲ್ಲಾ ಹುಡುಗರಾಗಿದ್ದರೂ ಕೂಡ ಅದಕ್ಕೆ ಹೆಚ್ಚಿಗೆ ಒತ್ತನ್ನು ಕೊಟ್ಟಿದ್ದೆವು. ಇದೇ ಮನೆಯಲ್ಲಿ 1995–96ರಲ್ಲಿ ಗಣೇಶ ಹಾಲು ಕುಡಿದ ಎಂದು ಕೆಲವು ಮಂತ್ರಿಗಳೇ ಒಪ್ಪಿಕೊಂಡರು. ನಾವು ಯಾವ ಪರಿಸ್ಥಿತಿಗೆ ತಲುಪಿದ್ದೇವೆಂದರೆ, ಈ ಮೂಢನಂಬಿಕೆಯಿಂದ ಗಣೇಶ ಹಾಲು ಕುಡಿದ ಎಂದು ಮಂತ್ರಿಗಳಿಬ್ಬರೂ ಇಲ್ಲಿಯೇ ಹೇಳಿದರು. ನಾನು ಈ ಮನೆಯಲ್ಲಿ ನೊಂದು ಹೇಳಿದೆ. ಗಣೇಶನಿಗೆ ನೀವೇಕೆ ಹಾಲು ಕುಡಿಸುತ್ತೀರಿ, ಇನ್ನೇನಾದರೂ ಕುಡಿಸುವಂಥ ಚಿಂತನೆ ಮಾಡಿ ಎಂದು ಹೇಳಿದ್ದೆವು. ಮೂಲತ: ನಮ್ಮನ್ನು ತಪ್ಪುದಾರಿಗೆ ಎಳೆಯುವಂಥ ಈ ಪದ್ಧತಿಗಳನ್ನು, ಮೂಢ ನಂಬಿಕೆಗಳನ್ನು ನಾವು ನಿಲ್ಲಿಸದೇ ಹೋದರೆ, ಮುಂದಿನ ದಿನಗಳಲ್ಲಿ ಕಷ್ಟ ಎನ್ನುವುದನ್ನು ನಾವು ಚಿಂತನೆ ಮಾಡಬೇಕು. ಅದನ್ನು ಚಿಂತನೆ ಮಾಡಿದಂಥವರು ಹೆಚ್. ನರಸಿಂಹಯ್ಯನವರು. ಅವರು ಬಹಳಷ್ಟು ಮುಂದೆ ಹೋಗಿ ಇದನ್ನು ತೆಗೆಯಬೇಕೆಂದಿದ್ದರು. ಅವರ ಹೆಸರಲ್ಲಿ ಒಂದು ಯೂನಿವರ್ಸಿಟಿ ಮಾಡಿ ಎಂದು. ಆಗಲೇ ಮಾನ್ಯ ಶ್ರೀರಾಮರೆಡ್ಡಿಯವರು ಹೇಳುತ್ತಿದ್ದರು. ಇದಕ್ಕಿಂತಲೂ ಹೆಚ್ಚಾಗಿ ಒಂದು ಕಮಿಟಿ ಮಾಡಿ, ಈ ಮೂಢನಂಬಿಕೆಗಳನ್ನು ವಿರೋಧ ಮಾಡುವಂಥ ಸ್ವಾಮಿಗಳು ಬರಬೇಕು. ನಿಡುಮಾಮಿಡಿ ಸ್ವಾಮಿಗಳು ಆಗಾಗ ಈ ಮೂಢನಂಬಿಕೆಗಳ ವಿರುದ್ಧವಾಗಿ ಮಾತನಾಡುತ್ತಾರೆ. ನನಗನ್ನಿಸುತ್ತದೆ ಇಲ್ಲಿಯೇ ಒಂದು ಸಮಿತಿ ಮಾಡಿ, ಇದನ್ನು ತೆಗೆಯುವಂಥ ಕೆಲಸವನ್ನು ಮಾಡದೇ ಇದ್ದರೆ ಮುಂದೆ ಕಷ್ಟವಾಗುತ್ತದೆ. ಅನೇಕ

ಜಾತಿಯ ಸ್ವಾಮಿಗಳು ಇದ್ದಾರೆ, ಇವರೆಲ್ಲರೂ ಸೇರಿ ಮಾಡಬಹುದು ಎಂದು ನಾನೇನೋ, ಅಂದುಕೊಂಡಿದ್ದೆ. ಆದರೆ, ಆ ಸ್ವಾಮಿಗಳು ಬೇರೆ ದಿಕ್ಕಿಗೆ ಹೋಗುತ್ತಾ ಇದ್ದಾರೆ. ಈ ದಿಕ್ಕಿನಲ್ಲಿ ಸಮಾಜವನ್ನು ಸೃಷ್ಟಿ ಮಾಡಿ, ಸರಿಯಾದ ದಾರಿಯಲ್ಲಿ ನಡೆಸಿಕೊಂಡು ಹೋಗುವಂಥ ಕೆಲಸ ಮಾಡುತ್ತಾ ಇಲ್ಲ. ಅದಕ್ಕೆ ಹೆಚ್. ನರಸಿಂಹಯ್ಯನವರ ಹೆಸರಿನಲ್ಲಿ, ಆ ತರಹ ಒಂದು ಸಮಿತಿ ಮಾಡಿ ಅಥವಾ ಏನು ವಾಟಾಳ್ ನಾಗರಾಜರು ಹೇಳಿದ ಹಾಗೆ ಸದನದ ಸಮಿತಿಯನ್ನೇ ಮಾಡಿ ವೈಚಾರಿಕವಾಗಿ ಚಿಂತನೆ ಮಾಡಿ, ಇದರ ಮೇಲೆ ಬೆಳಕನ್ನು ಚೆಲ್ಲುವಂಥ ಕೆಲಸವನ್ನು ಮಾಡಬೇಕೆನ್ನುವ ಮಾತನ್ನು ಈ ಸಮಯದಲ್ಲಿ ಹೇಳುತ್ತೇನೆ. ಇವತ್ತು, ಅವರು ಸಾಯುವುದಕ್ಕೆ ಮೊದಲು ಒಂದು ವಿಲ್ ಬರೆದು ಹೋಗಿದ್ದಾರೆ. ನಾನು ಸತ್ತು ಹೋದ ಮೇಲೆ ಎರಡು ಸಾವಿರ ರೂಪಾಯಿಗಳನ್ನು ನ್ಯಾಷನಲ್ ಕಾಲೇಜಿನಲ್ಲಿ ಇದಕ್ಕಾಗಿ ಕಟ್ಟಿದ್ದೇನೆ. ನನ್ನ ಹೆಣವನ್ನು ತೆಗೆದುಕೊಂಡು ಹೋಗಿ ಹೊಸೂರಿನಲ್ಲಿಯೇ ಸುಡಬೇಕು, ಈ ರೀತಿ ಸುಟ್ಟಿದ್ದ ಬೂದಿಯನ್ನು ಯಾವುದಾದರೂ ಮರಕ್ಕೆ ಹಾಕಬೇಕು. ಯಾರಾದರೂ ನದಿಗಳಿಗೆ ಅಥವಾ ಬೇರೆ ಕಡೆಗಳಿಗೆ ಹೊತ್ತುಕೊಂಡು ಹೋದರು ಎಂದು ಹೇಳಿ, ಅದನ್ನೂ ಕೂಡ ಬರೆದಿಟ್ಟಿದ್ದಾರೆ. ಆಮೇಲೆ, ಅದನ್ನು ಬರೆಯುವಾಗ ನನ್ನ ಬೂದಿಯನ್ನು ಈಚಲ ಮರಕ್ಕೆ ಮಾತ್ರ ಹಾಕಬೇಡಿ ಎಂದು ಹೇಳಿದರಂತೆ ಅವರ ವೈಚಾರಿಕ ಚಿಂತನೆ ಎಷ್ಟು ಎಂಬುದನ್ನು ನಾವು ಹೇಳುವುದಕ್ಕೆ ಸಾಧ್ಯವಿಲ್ಲ. ಅಂತಹ ಮನುಷ್ಯ, ಅಂತಹ ಇಳಿ ವಯಸ್ಸಿನಲ್ಲೂ ಕೂಡ ಈ ರೀತಿ ಹೇಳಿದ್ದಾರೆ. ಒಂದು ಒಂದೂವರೆ ತಿಂಗಳ ಹಿಂದೆ, ಏನು ಕುವೆಂಪುರವರ ಜನ್ಮ ಶತಾಬ್ದಿ ಗೌರಿಬಿದನೂರಿನಲ್ಲಿ ಆದಾಗ ಅವರು ಹೇಳಿದರು. ಕುವೆಂಪುರವರನ್ನು ನಾನು ವೈಸ್ ಚಾನ್ಸಲರ್ ಆಗಿದ್ದಾಗ ಕರೆದುಕೊಂಡು ಬಂದಿದ್ದು. ಸಾಮಾನ್ಯವಾಗಿ ಕುವೆಂಪುರವರು ಯಾವುದೇ ಸಭೆಗಳಿಗೆ ಹೋಗುತ್ತಿದ್ದವರಲ್ಲ. ಇವರು ಹೋಗಿ, ಕೂತುಕೊಂಡು ಅವರಿಗೆ ಎಷ್ಟು ಹೇಳಿದರೂ ಒಪ್ಪುತ್ತಲೇ ಇರಲಿಲ್ಲವಂತೆ. ಇವರೂ ಎದ್ದು ಬರಲಿಲ್ಲವಂತೆ. ಕಡೆಗೇ ನಾನೇ ಮಂಡಿ ಎಂದು ಕೊಂಡಿದ್ದೆ ನರಸಿಂಹಯ್ಯನವರೇ ನನಗಿಂತ ಮಂಡಿ ಇದ್ದೀರಿ ನೀವು ಎಂದು ಆ ಸಭೆಯಲ್ಲಿ ಕುವೆಂಪುರವರೇ ಹೇಳಿದ್ದು. ಈ ರೀತಿ ಕುವೆಂಪುರವರು ಆ ಸಭೆಗೆ ಬಂದು, ಘಟಿಕೋತ್ಸವದಲ್ಲಿ ಕುವೆಂಪುರವರು ಭಾಗವಹಿಸಿದ್ದರು ಎನ್ನುವ ಮಾತನ್ನು ಅವರು ಹೇಳಿದ್ದರು. ಈ ರೀತಿ ಹೇಳಿದಾಗ, ಅವರಲ್ಲಿದ್ದಂತಹ ಧೀಮಂತತನವನ್ನೂ ನಾವು ನೆನೆಯಬೇಕು, ಇಂತಹವರನ್ನು ಈವತ್ತು ನಾವು ಕಳೆದುಕೊಂಡಿದ್ದೇವೆ. ಇವತ್ತು ಅವರ ಹೆಸರನ್ನು ಯೂನಿವರ್ಸಿಟಿಗೆ ಇಡುವುದರ ಜೊತೆಗೆ, ಈ ಮೂಢನಂಬಿಕೆಗಳನ್ನು ತೆಗೆಯುವಂಥ ಒಂದು ಸಮಿತಿ ಇವತ್ತು ಅಗತ್ಯ ಇದೆ ಈ ತರಹ ಚಿಂತನೆ ಮಾಡುವುದನ್ನು ನಾವೆಲ್ಲರೂ ಕಲಿಯಬೇಕೆನ್ನುವ ಮಾತನ್ನು ಈ ಸಮಯದಲ್ಲಿ ಹೇಳುತ್ತೇನೆ. ಇದರ ಜೊತೆಗೆ ನಾಗರಾಜರವರೂ ಕೂಡ ನಮ್ಮನ್ನು ಅಗಲಿದ್ದಾರೆ. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ಆ ಸಭೆಯಲ್ಲಿ

ನಾನೂ ಇದ್ದೆ. ಅವತ್ತು ಮಾನ್ಯ ವಾಟಾಳ್ ನಾಗರಾಜರವರು ಮಾನ್ಯ ರಮೇಶ್‌ಕುಮಾರ್‌ರವರು ಆ ನಾಗರಾಜರವರ ವಿಷಯದಲ್ಲಿ ಬಹಳಷ್ಟು ಚರ್ಚೆ ಮಾಡಿದರು. ಮುಖ್ಯಮಂತ್ರಿಗಳ ಜೊತೆಯಲ್ಲಿ ಆವತ್ತು ನಾನು ಕುಳಿತಿದ್ದೆ. ಅವತ್ತು ನಿಜವಾಗಿಯೂ ಕೂಡ ಅವರನ್ನು ಒಬ್ಬ ಮೆಂಬರ್ ಆಗಿ ಮಾಡುವುದಕ್ಕಾಗಲಿಲ್ಲ ಎನ್ನುವಂಥ ನೋವನ್ನು ಮಾನ್ಯ ವಾಟಾಳ್ ನಾಗರಾಜರು ವ್ಯಕ್ತಪಡಿಸಿದಾಗ, ನನಗೂ ಕೂಡ ನೋವಾಯಿತು. ಆ ಸ್ಟೇಡಿಯಂ ಕಟ್ಟಿದಂಥ ಮನುಷ್ಯನಿಗೇ ಅಲ್ಲಿ ಇಲ್ಲದ ಹಾಗೆ ಆಯಿತೇನೋ ಎನ್ನುವಂಥ ನೋವನ್ನು ವ್ಯಕ್ತಪಡಿಸಿ, ಇವತ್ತು ಈ ಸಂತಾಪದಲ್ಲಿ ನರಸಿಂಹಯ್ಯನವರ ಮತ್ತು ನಾಗರಾಜರ, ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹೇಳಿ ನನಗೆ ನಾಲ್ಕು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ) : ಸನ್ಮಾನ್ಯ ಅಧ್ಯಕ್ಷರೇ, ಡಾ: ಹೆಚ್. ನರಸಿಂಹಯ್ಯನವರು ನಮ್ಮನ್ನು ಅಗಲಿ ಹೋಗಿದ್ದಾರೆ. ಸಾಂಪ್ರದಾಯ ಬದ್ಧವಾಗಿ ಈ ಸದನ ಇಂತಹ ಸನ್ನಿವೇಶಗಳಲ್ಲಿ, ಅವರನ್ನು ಕುರಿತು ಮಾತನಾಡತಕ್ಕಂಥಾದ್ದು ಅಭ್ಯಾಸ. ಅನೇಕ ವೇಳೆ ನಾವು ಈ ಸಂತಾಪ ಸೂಚಕ ನಿರ್ಣಯದ ಮೇಲೆ ಮಾತನಾಡುವಾಗ ಬದ್ಧತೆಗಿಂತಲೂ ಕೂಡ ಸಾಂಪ್ರದಾಯಕ್ಕೆ ಕಟ್ಟುಬೀಳುತ್ತೇವೆ. ನರಸಿಂಹಯ್ಯನವರ ವಿಚಾರದಲ್ಲಿ ನಾವು ನೆನೆಪಿಸಿಕೊಳ್ಳ ಬೇಕಾಗಿರತಕ್ಕಂಥಾದ್ದು, ಅವರ ಬಾಲ್ಯ. ಆ ಬಡತನ ಎಷ್ಟು ಕೆಟ್ಟದ್ದು ಎಂದರೆ, ತನ್ನ ತಾಯಿ ವೆಂಕಟಮ್ಮ, ಊರಿನಲ್ಲಿ ಒಬ್ಬರು ಶ್ರೀಮಂತರ ಮನೆಯಲ್ಲಿ ಕೆಲಸಕ್ಕೆ ಇದ್ದರು. ಅವರ ಮನೆಯಲ್ಲಿ ಕೆಲಸ ಮಾಡಿ, ಅವರು ಕೊಟ್ಟ ತಂಗಳನ್ನು ತೆಗೆದುಕೊಂಡು ಬಂದುದ್ದನ್ನು ತಿಂದು ಇವರು ಶಾಲೆಗೆ ಹೋಗುತ್ತಿದ್ದರು. ಅವರ ಆತ್ಮ ಬದುಕಿನಲ್ಲಿ ಇದನ್ನು ಬರೆಯುತ್ತಾರೆ. ಹೊಸೂರಿನಿಂದ ಅವರು ಬೆಂಗಳೂರಿಗೆ ಬರಬೇಕಾಗಿದ್ದರೆ ಕಾಲ್ನಡಿಗೆಯಲ್ಲೇ ಬರುತ್ತಾ ಇದ್ದರು. ರೈಲೂ ಇಲ್ಲ, ಬಸ್ಸೂ ಇಲ್ಲ. ಬಾಲ್ಯದಲ್ಲೇನೋ ಬಡತನ ಇತ್ತು. ಬಡತನವನ್ನು ಮರೆಯತಕ್ಕ ಅವಕಾಶಗಳು ಅವರಿಗೆ ಬಂದಾಗಲೂ ಕೂಡ, ಮರೆಯತಕ್ಕ ಪ್ರಯತ್ನವನ್ನು ಅವರು ಎಂದೂ ಮಾಡಲೇ ಇಲ್ಲ. ತನ್ನ ಬಾಲ್ಯದ ಬಡತನದ ಬಗ್ಗೆ ಕಡೇ ಕ್ಷಣದವರೆಗೂ ಹೆಮ್ಮೆಯಿಂದ ಬದುಕಿದರು. ಅದನ್ನೇ ಅವರು ಹೆಮ್ಮೆ ಎಂದು ನಿರ್ಣಯ ಮಾಡಿಕೊಂಡಿದ್ದರು. ಬದುಕಿನ ಶೈಲಿ ಅವತ್ತಿಗೂ, ಇವತ್ತಿಗೂ ಎಷ್ಟು ವ್ಯತ್ಯಾಸವಿದೆಯೆಂದರೆ, ಆಕಸ್ಮಿಕವಾಗಿ ಯಾವುದೋ ಒಂದು ಅಧಿಕಾರ ಸಿಕ್ಕಿದರೆ, ಸಾರ್ವಜನಿಕವಾಗಿ ಅಪಾರವಾದ ಹಣವನ್ನು ಲೂಟಿ ಮಾಡಿ ವಾಲಂಟರಿ ಡಿಸ್ ಕ್ಲೋಷಕ್ ಸ್ಕೀಮ್ ಎಂದು ಬಂದಾಗ, ಅದರಲ್ಲಿ ನುಸುಳಿಕೊಂಡು ಆಸ್ತಿಯನ್ನೆಲ್ಲಾ ಸಕ್ರಮ ಮಾಡಿಕೊಳ್ಳತಕ್ಕ ಜನ ಇವತ್ತು ಇರುವಾಗ, ಆ ಬಾಲ್ಯದ ಬಡತನದ ಬಗ್ಗೆ ಹೆಮ್ಮೆಯಿಂದ ಬದುಕತಕ್ಕ ನರಸಿಂಹಯ್ಯನವರು ಎಷ್ಟೊಂದು ಆದರ್ಶ ಎಂದು ನಾವು ನೆನೆಪಿಸಿಕೊಳ್ಳಬೇಕು. ಕೇಂದ್ರ ಸರ್ಕಾರದವರು ಅನೇಕ ಪ್ರಶಸ್ತಿಗಳನ್ನು